PRGI No:
KNKAN/26/A1167

ವಿಜಯನಗರ – ಕೊಪ್ಪಳ – ಬಳ್ಳಾರಿ – ರಾಯಚೂರು ಜಿಲ್ಲೆಗಳಲ್ಲಿ ಏಕ ಕಾಲಕ್ಕೆ ಪ್ರಕಟಿತ

# ಹೊಸಪೇಟೆ ನಾಡಿಮಿಡಿತ

ಸುದ್ದಿ ಜಾಹೀರಾತಿಗಾಗಿ ಸಂಪರ್ಕಿಸಿರಿ
ಮೊ: 9980107729
9845757747
9538367319

ಸಂಪಾದಕರು : ರಾಮಜಿ ನಾಯ್ಕ್ ಆರ್
ವ್ಯವಸ್ಥಾಪಕ ಸಂಪಾದಕರು : ಬಿ ಹೆಚ್ ಎಸ್ ರಾಜು
ಸಹ ಸಂಪಾದಕರು : ವಿ ಗಾಳೆಪ್ಪ

HOSAPETE NAADIMIDITHA

Editor : Ramjee Naik R

KANNADA DAILY NEWS PAPER ವಿಜಯನಗರ ಆವೃತ್ತಿ ಕನ್ನಡ ದಿನಪತ್ರಿಕೆ POSTAL REG NO : PMG/KA/NK/BLY/05/2026-2028

Vol.–01 Issue–192 13/10/2026 Tuesday Rs.02/– E-mail:hosapetenadimidita@gmail.com ಸಂಪುಟ–01ಸಂಚಿಕೆ–192 ಮಂಗಳವಾರ 13/10/2026ಬೆಲೆ ರೂ.02/–

### ಪಕ್ಷಾತೀತವಾಗಿ ರೈತರ ಹೋರಾಟ

## ಸಕ್ಕರೆ ಕಾರ್ಖಾನೆ ಭೂಮಿ ಪೂಜೆ ಆಗುವವರೆಗೂ ಹೋರಾಟ ನಿಲ್ಲಲ್ಲ



ಹೊಸಪೇಟೆ, 12– ಈ ಭಾಗದ ರೈತರ ಬಹುದಿನದ ಬೇಡಿಕೆಯಾಗಿರುವ ಸಕ್ಕರೆ ಕಾರ್ಖಾನೆಯನ್ನು ಶೀಘ್ರದಲ್ಲೇ ಆರಂಭಿಸಬೇಕು ಎಂದು ಒತ್ತಾಯಿಸಿ, ಅ.18 ರಂದು ಸ್ಥಳೀಯ ಶಾಸಕ ಹೆಚ್.ಆರ್. ಗವಿಯಪ್ಪ ಅವರ ನಿವಾಸದ ಎದುರು ಧರಣಿ ಸತ್ಯಾಗ್ರಹ ನಡೆಸಲು ಹೊಸಪೇಟೆ ಸಕ್ಕರೆ ಕಾರ್ಖಾನೆ ಹೋರಾಟ ಸಮಿತಿ ತೀರ್ಮಾನಿಸಿದೆ.

ಸ್ಥಳೀಯ ರೈತ ಭವನದಲ್ಲಿ ಇಂದು ಜರುಗಿದ ಪತ್ರಿಕಾಗೋಷ್ಠಿಯಲ್ಲಿ ಹೋರಾಟ ಸಮಿತಿ ಮುಖಂಡ ಎಂ. ಜಂಬಯ್ಯ ನಾಯಕ ಈ ವಿಷಯ ತಿಳಿಸಿದರು.

"ಬಹಿರಂಗ ಸಭೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ 24 ಗಂಟೆಯಲ್ಲಿ ಸಕ್ಕರೆ ಕಾರ್ಖಾನೆ ಆರಂಭಿಸುವುದಾಗಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಸ್ಥಳೀಯ ಶಾಸಕ ಹೆಚ್.ಆರ್. ಗವಿಯಪ್ಪ ಭರವಸೆ ನೀಡಿದ್ದರು. ಆದರೆ ಈವರೆಗೆ ನಮ್ಮ ಬೇಡಿಕೆ ಈಡೇರಿಲ್ಲ. ಈ ಹಿನ್ನೆಲೆಯಲ್ಲಿ ಹೋರಾಟ ನಡೆಸುವುದು ಅನಿವಾರ್ಯವಾಗಿದೆ" ಎಂದರು.

"ಅ.18 ರಂದು ರೈತರು, ಕೃಷಿ ಕೂಲಿ ಕಾರ್ಮಿಕರು, ವಿದ್ಯಾರ್ಥಿ, ಯುವಜನರು, ವಕೀಲರು, ಸಾಹಿತಿಗಳು, ಕಲಾವಿದರು ಸೇರಿದಂತೆ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಒಂದು ದಿನದ ಧರಣಿ ಸತ್ಯಾಗ್ರಹ ನಡೆಸಲಾಗುವುದು. ಇದು ಯಾವುದೇ ಪಕ್ಷ, ವ್ಯಕ್ತಿಯ ವಿರುದ್ಧದ ಹೋರಾಟವಲ್ಲ. ಸಕ್ಕರೆ ಕಾರ್ಖಾನೆಗೆ ಭೂಮಿ ಪೂಜೆ ಆಗುವವರೆಗೆ ನಮ್ಮ ಹೋರಾಟ ಮುಂದುವರೆಯಲಿದೆ" ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರೈತ ಮುಖಂಡ ಜಿ. ಖಾಜಾ ಹುಸೇನ್ ನಿಯಾಜಿ, ಹುಡಾ ಮಾಜಿ ಅಧ್ಯಕ್ಷ ಎಲ್. ಸಿದ್ದನಗೌಡ, ಹುಡಾ ಅಧ್ಯಕ್ಷ ಹೆಚ್.ಎನ್. ಮಹಮದ್ ಇಮಾಮ್ ನಿಯಾಜಿ, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಆರ್. ಕೊಟ್ರೇಶ್, ಪಿಎಲ್ಡಿ ಬ್ಯಾಂಕ್ ಅಧ್ಯಕ್ಷ ಅಮಾಜಿ ಹೇಮಣ್ಣ, ರೈತ ಮುಖಂಡರಾದ ಸೈಯದ್ ಸಮೀವುಲ್ಲಾ, ಟಿ.ನಾಗರಾಜ, ಸಣ್ಣಕ್ಕಿ ರುದ್ರಪ್ಪ, ಎಂ.ಜಡೆಪ್ಪ, ಬಾಬು, ದುರುಗಪ್ಪ ಪೂಜಾರಿ, ಜಂಬಾನಳ್ಳಿ ವಸಂತ, ಕಿಚಿಡಿ ಶ್ರೀನಿವಾಸ, ಕಟಿಗಿ ಜಂಬಯ್ಯ, ವೈ. ಯಮುನೇಶ್, ಎನ್.ಯಲ್ಲಾಲಿಂಗ, ಎಲ್. ಎಸ್.ಆನಂದ್, ಕೆ.ಎಂ.ಸಂತೋಷ ಕುಮಾರ್, ಬಿ.ತಾಯಪ್ಪ ನಾಯಕ, ಜೈರುದ್ದೀನ್, ತಾರಿಹಳ್ಳಿ ಜಂಬಯ್ಯ, ರಾಮಚಂದ್ರ ಬಾಬು ಇದ್ದರು.

## "ಅಪ್ಪನ ನೆನಪು ಅಜರಾಮರ ಅವರ ಆದರ್ಶಗಳೇ ನಮ್ಮ ಬದುಕಿನ ದಾರಿದೀಪ"

### ಎನ್.ಟಿ. ಬೊಮ್ಮಣ್ಣನವರ 4ನೇ ವರ್ಷದ ಪುಣ್ಯಸ್ಮರಣೆಯಲ್ಲಿ ಭಾವಪೂರ್ಣ ನಮನ



ಕೂಡ್ಲಿಗಿ, 12– ತಂದೆಯವರ ನೆನಪುಗಳು ಎಂದಿಗೂ ಮಾಸುವುದಿಲ್ಲ, ಅವರು ಹಾಕಿಕೊಟ್ಟ ಆದರ್ಶಗಳ ಹಾದಿ ಎಂದಿಗೂ ಅಳಿಸಿಹೋಗುವುದಿಲ್ಲ. ಜನಸೇವೆಯ ಮೂಲಕ ಜನಮನದಲ್ಲಿ ಅಚ್ಚಳಿಯದ ಛಾಪು ಮೂಡಿಸಿದ ಕೂಡ್ಲಿಗಿ ಕ್ಷೇತ್ರದ ಮಾಜಿ ಶಾಸಕರಾದ ದಿವಂಗತ ಎನ್.ಟಿ. ಬೊಮ್ಮಣ್ಣನವರ 4ನೇ ವರ್ಷದ ಪುಣ್ಯಸ್ಮರಣೆಯನ್ನು ಅವರ ಸ್ವಗ್ರಾಮ ನರಸಿಂಹಗಿರಿಯಲ್ಲಿ ಭಕ್ತಿಭಾವದಿಂದ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮಾನ್ಯ ಶಾಸಕರಾದ ಡಾ. ಶ್ರೀನಿವಾಸ್ ಎನ್.ಟಿ., ಸಮಾಜ ಸೇವಕರಾದ ಶ್ರೀ ತಮ್ಮಣ್ಣ ಎನ್.ಟಿ., ಕುಟುಂಬದ ಸದಸ್ಯರು, ಆತ್ಮೀಯರು ಹಾಗೂ ಎನ್.ಟಿ.ಬಿ. ತಾತನವರ ಅಭಿಮಾನಿಗಳು ಒಂದಾಗಿ ಸೇರಿ ಪೂಜಾ ಕಾರ್ಯಗಳಲ್ಲಿ ಭಾಗವಹಿಸಿ, ದಿವಂಗತರಿಗೆ ಭಾವಪೂರ್ಣ ನಮನಗಳನ್ನು ಸಲ್ಲಿಸಿದರು.

ತಂದೆಯವರನ್ನು ಕಳೆದುಕೊಂಡ ನೋವು ಎಂದಿಗೂ ಮರೆಯಾಗದಿದ್ದರೂ, ಅವರು ತೋರಿದ ಜನಸೇವೆಯ ಹಾದಿ, ನಿಸ್ವಾರ್ಥ ಬದುಕು, ಸರಳ ವ್ಯಕ್ತಿತ್ವ ಹಾಗೂ ಜನರ ಮೇಲಿಟ್ಟಿದ್ದ ಅಪಾರ ಪ್ರೀತಿ ಇಂದಿಗೂ ಕುಟುಂಬದವರಿಗೆ ಮತ್ತು ಅಭಿಮಾನಿಗಳಿಗೆ ಸ್ಫೂರ್ತಿಯಾಗಿದೆ. ಅವರ ನೆನಪು ಕೇವಲ ಕುಟುಂಬದ ಹೃದಯಗಳಲ್ಲಿ ಮಾತ್ರವಲ್ಲ, ಅವರು ಪ್ರೀತಿಸಿದ ಜನರ ಮನಸ್ಸುಗಳಲ್ಲಿಯೂ ಸದಾ ಜೀವಂತವಾಗಿದೆ.

ದಿವಂಗತ ಎನ್.ಟಿ. ಬೊಮ್ಮಣ್ಣನವರಿಗೆ 4ನೇ ವರ್ಷದ ಪುಣ್ಯಸ್ಮರಣೆಯಂದು ಅನಂತ ನಮನಗಳು. ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ.

## ಹರಪನಹಳ್ಳಿ: ಮನೆಕಳ್ಳತನಕ್ಕೆ ಯತ್ನ ವಿಫಲ



ಹೊಸಪೇಟೆ, 12– ವಿಜಯನಗರ ಜಿಲ್ಲೆ ಹರಪನಹಳ್ಳಿ ಪಟ್ಟಣದ ಮನೆಯೊಂದರಲ್ಲಿ ಕಳ್ಳರು ಮನೆಯೊಂದರ ಬೀಗ ಮುರಿದ ಕಳ್ಳತನಕ್ಕೆ ಯತ್ನಿಸಿದ ಘಟನೆ ಜರುಗಿದೆ. ಹರಪನಹಳ್ಳಿ ಪಟ್ಟಣದ ಕೆ.ಹೆಚ್.ಬಿ ಕಾಲೊನಿಯ ನಿವಾಸಿ ನಾಗರಾಜ ಎಂಬುವವರ ಮನೆಯಲ್ಲಿ ಕಳ್ಳತನಕ್ಕೆ ವಿಫಲ ಯತ್ನ ಜರುಗಿದೆ.

ಎರಡು ವರ್ಷದಲ್ಲಿ ಇದು ಮೂರನೇ ಬಾರಿ ಕಳ್ಳತನಕ್ಕೆ ವಿಫಲ ಯತ್ನ ಜರುಗಿದೆ. ಮೂರು ಬಾರಿಯೂ ಕಳ್ಳರು ಮನೆಯ ಬೀಗ ಒಡೆದು ಕಳ್ಳತನಕ್ಕೆ ಯತ್ನ ನಡೆಸಿದ್ದಾರೆ. ಮನೆಯ ಕಬ್ಬಿಣದ ಗೇಟ್ ಮುರಿದಿದ್ದಾರೆ. ಭಾನುವಾರ ಮಧ್ಯ ರಾತ್ರಿ ಮೂವರು ಕಳ್ಳರು ಬಂದಿದ್ದು, ಮೇಲಿನ ಮಹಡಿ ಮನೆಯವರು ಹೊರಬರದಂತೆ ಅವರ ಮನೆ ಬಾಗಿಲಿನ ಚಿಲಕ ಹಾಕಿದ್ದಾರೆ.

ನಂತರ ಕೆಳಗಿನ ಮನೆಯಲ್ಲಿ ಕಳ್ಳತನಕ್ಕೆ ಯತ್ನ ನಡೆಸಿದ್ದಾರೆ. ವಾರದ ಹಿಂದೆ ಈ ಕಳ್ಳರು ಮಧ್ಯಾಹ್ನ ಬಂದು ಮನೆ ಮತ್ತು ಸುತ್ತಮುತ್ತಲ ಪ್ರದೇಶವನ್ನು ನೋಡಿ–ಕೊಂಡು ಹೋಗಿದ್ದಾರೆ.ಘಟನೆ ಜರುಗಿದಾಗ ಮನೆಯವರು ದಸರಾ ರಜೆ ಹಿನ್ನಲೆಯಲ್ಲಿ ಊರಿಗೆ ಹೋಗಿದ್ದರು ಎನ್ನಲಾಗಿದೆ.

ಇದನ್ನು ನೋಡಿಕೊಂಡೇ ಕಳ್ಳರು ಮನೆ ಕಳ್ಳತನಕ್ಕೆ ಯತ್ನಿಸಿದ್ದರು ಎನ್ನಲಾಗಿದೆ.ಈ ಎಲ್ಲಾ ಘಟನೆಗಳು ಮನೆಯ ಸಿಸಿ ಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ. ಈ ಭಾಗದಲ್ಲಿ ಇಂತಹ ಘಟನೆಗಳು ಪದೇ ಪದೇ ಜರುಗುತ್ತಿರುವುದರಿಂದ ಭಾಗದ ನಾಗರೀಕರು ತೀವ್ರ ಆತಂಕಕ್ಕೆ ಒಳಗಾಗಿದ್ದಾರೆ.

## ಜಿಲ್ಲಾ ಕಾರಾಗೃಹ ಬಂದಿಗಳಿಗೆ ಒಳಾಂಗಣ ಕ್ರೀಡಾಕೂಟ



ವಿಜಯನಗರ (ಹೊಸಪೇಟೆ), 12– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ಹಾಗೂ ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ದಸರಾ ಹಬ್ಬದ ಪ್ರಯುಕ್ತ ಹೊಸಪೇಟೆಯ ಜಿಲ್ಲಾ ಕಾರಾಗೃಹದಲ್ಲಿ ಬಂದಿಗಳ ಮನರಂಜನೆಗಾಗಿ ಇಂದು ಒಳಾಂಗಣ ಕ್ರೀಡಾಕೂಟ ಆಯೋಜಿಸಲಾಯಿತು.

ಕಾರಾಗೃಹ ಸುಧಾರಣಾ ಸೇವಾ ಇಲಾಖೆಯ ಮಹಾನಿರ್ದೇಶಕ ಅಲೋಕ್ ಕುಮಾರ್ ಹಾಗೂ ಜಿಲ್ಲಾ ಕಾರಾಗೃಹ ಅಧೀಕ್ಷಕ ಎಫ್.ಜಿ. ಬಾರಿಕೇರ್ ಅವರ ನಿರ್ದೇಶನದಂತೆ ನಡೆದ ಕ್ರೀಡಾಕೂಟದಲ್ಲಿ ಚೆಸ್, ಕೇರಂ ಹಾಗೂ ಮ್ಯೂಸಿಕಲ್ ಚೇರ್ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

ಶಿಕ್ಷಕರ ಸಂಘದ ಉಪಾಧ್ಯಕ್ಷೆ ವಿಜಯಕುಮಾರಿ ಸೇರಿದಂತೆ ಶಿಕ್ಷಕರು ಹಾಗೂ ದೈಹಿಕ ಶಿಕ್ಷಕರ ಮಾರ್ಗದರ್ಶನದಲ್ಲಿ ಸ್ಪರ್ಧೆಗಳು ಯಶಸ್ವಿಯಾಗಿ ನಡೆದವು. ಕ್ರೀಡಾಕೂಟದಲ್ಲಿ ವಿಜೇತರಾದ ಬಂದಿಗಳಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಸಹಾಯಕ ಜೈಲರ್ ಎಸ್.ಎಸ್.ಲಚ್ಯಾಣ, ಕೆ.ರಿಯಾಜ್, ಸೈನಿಕ ಭೀಮೇಶ್ ಸೇರಿದಂತೆ ಕಾರಾಗೃಹದ ಅಧಿಕಾರಿಗಳು, ಸಿಬ್ಬಂದಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ದಸರಾ ಚೌಡೇಶ್ವರಿ ದೇವಿ ಮೂರ್ತಿ ಪ್ರತಿಷ್ಠಾಪನೆ



ವರದಿ :ಡಿ.ಪರಶುರಾಮಪ್ಪ

ಹೂವಿನಹಡಗಲಿ, 12– ಶರನ್ನವರಾತ್ರಿ ದಸರಾ ಮಹೋತ್ಸವದ ಅಂಗವಾಗಿ ಪಟ್ಟಣದ ಶ್ರೀ ಗವಿಸಿದ್ದೇಶ್ವರ ಮಠದ ಮುಂಭಾಗದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಚೌಡೇಶ್ವರಿ ದೇವಿ ಮೂರ್ತಿ ಪ್ರತಿಷ್ಠಾಪನೆ ಪೂಜಾ ಕಾರ್ಯಕ್ರಮ ಸಕಲ ಸಂಭ್ರಮ ಸಡಗರದಿಂದ ನೆರವೇರಿತು.

ಗವಿಮಠದ ಡಾ ಹಿರಿಶಾಂತವೀರ ಮಹಾಸ್ವಾಮಿಗಳು ದೇವಿ ಚೌಡೇಶ್ವರಿಗೆ ಮಹಾಪೂಜೆ ಸಲ್ಲಿಸಿದರು. ಸಕಲ ಸದ್ಭಕ್ತರಿಗೆ ಒಳಿತಾಗಲಿ ಎಂದು ಪ್ರಾರ್ಥಿಸಿದರು.

ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಮನಸ್ಸಿಗೆ ನೆಮ್ಮದಿ ಸಂತೋಷ ಲಭಿಸುತ್ತದೆ.

ಚೌಡೇಶ್ವರಿ ದೇವಿಯ ಆರಾಧನೆಯಿಂದ ಜೀವನವು ಪಾವನವಾಗುತ್ತದೆ. ಜನರ ನೋವು ಕಷ್ಟ ಪರಿಹರಿಸಲು

ದೇವಿಯ ಆಶೀರ್ವಾದ ಸದಾ ಬೇಕು ಎಂದು ಅಭಿಪ್ರಾಯಪಟ್ಟರು.

ವೀರಶೈವ ಸಮಾಜದ ನಗರ ಘಟಕದ ಅಧ್ಯಕ್ಷ ಕೋಡಿಹಳ್ಳಿ ಮುದುಕಪ್ಪ ಮಾತನಾಡಿ ಪಟ್ಟಣದ ಪ್ರತಿಷ್ಠಿತ ಶ್ರೀ ಗವಿಸಿದ್ದೇಶ್ವರ ಮಠದ ಡಾ ಹಿರಿಶಾಂತವೀರ ಮಹಾಸ್ವಾಮಿಗಳ ನೇತೃತ್ವದಲ್ಲಿ ನಿರಂತರವಾಗಿ ದಸರಾ ಹಬ್ಬದ ನಿಮಿತ್ತ ಚೌಡೇಶ್ವರಿ ದೇವಿಯ ಪೂಜಾ ಮಹೋತ್ಸವ ಆಯೋಜಿಸಲಾಗಿದೆ. ಚೌಡೇಶ್ವರಿ ದೇವಿ ಸಕಲರಿಗೂ ಮಂಗಳ ಉಂಟುಮಾಡಲಿ ಎಂದು ತಿಳಿಸಿದರು.

ಚೌಡೇಶ್ವರಿ ದೇವಿ ಆಚರಣೆ ಸಮಿತಿ ಅಧ್ಯಕ್ಷ ಅಲಂಕಾರ ಪ್ರಿಯ ಸೊಪ್ಪಿನ ವೀರೇಶ್ ಸಮಿತಿಯ ಸದಸ್ಯರಾದ ಶರಣಪ್ಪ, ಸೊಪ್ಪಿನ ಶಂಭುನಾಥ, ಉಪನ್ಯಾಸಕ ಚನ್ನಬಸಯ್ಯ ಇತರರು ಉಪಸ್ಥಿತರಿದ್ದರು.

ಇದಕ್ಕೂ ಮುನ್ನ ಚೌಡೇಶ್ವರಿ ದೇವಿ ಮೂರ್ತಿಯನ್ನು ಸಕಲ ಮಂಗಳ ವಾದ್ಯಗಳೊಂದಿಗೆ ಜಾನಪದ ಕಲಾವಿದರ ನೃತ್ಯ ಕುಂಭಮೇಳದೊಂದಿಗೆ ಭವ್ಯ ಮೆರವಣಿಗೆಯಲ್ಲಿ ಮುಖ್ಯ ರಸ್ತೆಯ ಮೂಲಕ ಗವಿಮಠದ ವರೆಗೆ ಸಾಗಿ ಬಂದು ನಂತರ ಪ್ರತಿಷ್ಠಾಪನೆ ಪೂಜೆ ಸಲ್ಲಿಸಲಾಯಿತು.

### ಭೀಕರ ಬರಗಾಲದ ನಡುವೆ ಇಂಗಳಿಗಿಯಲ್ಲಿ

## ನೂತನ ಗೋಶಾಲೆ ಉದ್ಘಾಟನೆ



ಹೊಸಪೇಟೆ, 12– ರಾಜ್ಯಾದ್ಯಂತ ಆವರಿಸಿರುವ ಭೀಕರ ಬರಗಾಲದ ಹಿನ್ನೆಲೆಯಲ್ಲಿ ಗೋವುಗಳ ರಕ್ಷಣೆ ಹಾಗೂ ಪಾಲನೆಗಾಗಿ ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಇಂಗಳಿಗಿ ಗ್ರಾಮದ ಹೊರವಲಯದಲ್ಲಿ ನೂತನ ಗೋಶಾಲೆಯನ್ನು ಮಂಗಳವಾರ ಲೋಕಾರ್ಪಣೆಗೊಳಿಸಲಾಯಿತು.

ಶ್ರೀ ದೀಗಂಬರ ಭಾರತಿ ಸ್ವಾಮೀಜಿ ಅವರು ಪೂಜಾ ವಿಧಿ ನೆರವೇರಿಸಿ ಗೋಶಾಲೆಯನ್ನು ಉದ್ಘಾಟಿಸಿದರು.

ಪ್ರಮುಖ ಮುಖ್ಯಾಂಶಗಳು:

– 21 ಗೋವುಗಳಿಗೆ ಆಶ್ರಯ: ಪ್ರಸ್ತುತ ನೂತನವಾಗಿ ಆರಂಭಗೊಂಡಿರುವ ಈ ಗೋಶಾಲೆಯಲ್ಲಿ 21 ಗೋವುಗಳಿಗೆ ಆಶ್ರಯ ಕಲ್ಪಿಸಲಾಗಿದ್ದು, ಹಲವು ದಾನಿಗಳು ಗೋಶಾಲೆಗೆ ನೆರವಿನ ಹಸ್ತ ಚಾಚಿದ್ದಾರೆ.

– ಪ್ರಮುಖ ಗಣ್ಯರ ಭಾಗಿ: ಉದ್ಘಾಟನಾ ಸಮಾರಂಭದಲ್ಲಿ ಹಗರಿಬೊಮ್ಮನಹಳ್ಳಿ ಕ್ಷೇತ್ರದ ಶಾಸಕ ನೇಮಿರಾಜ್ ನಾಯ್ಕ್, ಜನಪ್ರಿಯ ಹಾಸ್ಯ ನಟ ಬಿರಾದಾರ್ ಹಾಗೂ ಸ್ಥಳೀಯ ಗ್ರಾಮಸ್ಥರು ಮತ್ತು ಮುಖಂಡರು ಭಾಗವಹಿಸಿದ್ದರು.

– ಸೇವಾವ್ಯಾಪ್ತಿ ವಿಸ್ತರಣೆ: ಈಗಾಗಲೇ ಅನ್ನದಾಸೋಹ ಹಾಗೂ ಶಿಕ್ಷಣ ದಾಸೋಹದಂತಹ ಸಾಮಾಜಿಕ ಕಾರ್ಯಗಳನ್ನು ನಡೆಸಿಕೊಂಡು ಬರಲಾಗುತ್ತಿದ್ದು, ಇದೀಗ ಗೋವುಗಳ ರಕ್ಷಣೆಗಾಗಿ ಗೋಶಾಲೆಯನ್ನೂ ಪ್ರಾರಂಭಿಸಲಾಗಿದೆ.

"ಗೋವುಗಳ ಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯ. ಬರಗಾಲದ ಈ ಕಠಿಣ ಸಮಯದಲ್ಲಿ ಗೋವುಗಳನ್ನು ಕಸಾಯಿಖಾನೆಗೆ ಸಾಗಿಸುವುದನ್ನು ತಡೆಗಟ್ಟಿ, ಅವುಗಳಿಗೆ ಸರಿಯಾದ ಮೇವು ಮತ್ತು ಆಶ್ರಯ ನೀಡುವುದು ಅತ್ಯಗತ್ಯ" ಎಂದು ಶಾಸಕ ನೇಮಿರಾಜ್ ನಾಯ್ಕ್ ಹೇಳಿದರು.

ಸ್ಥಳೀಯ ದಾನಿಗಳ ನೆರವಿನೊಂದಿಗೆ ಆರಂಭಗೊಂಡಿರುವ ಈ ಗೋಶಾಲೆಗೆ ಸುತ್ತಮುತ್ತಲಿನ ಗ್ರಾಮಸ್ಥರಿಂದ ಹಾಗೂ ಸಾರ್ವಜನಿಕರಿಂದ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ.

### ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಆಗ್ರಹಿಸಿ

## ಬ್ಲಾಕ್ ಕಾಂಗ್ರೆಸ್‌ನಿಂದ ಪ್ರತಿಭಟನೆ



ಹೊಸಪೇಟೆ, 12– ಚುನಾವಣಾ ಆಯುಕ್ತರಾದ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಆಗ್ರಹಿಸಿ ಹಾಗೂ ಎಸ್.ಐ.ಆರ್ ಪ್ರಕ್ರಿಯೆಯನ್ನು ತಕ್ಷಣವೇ ರದ್ದುಗೊಳಿಸುವಂತೆ ಒತ್ತಾಯಿಸಿ ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿಂದು ಪ್ರತಿಭಟನೆ ನಡೆಸಿದರು.

ಸ್ಥಳೀಯ ಡಾ.ಬಿ.ಅರ್.ಅಂಬೇಡ್ಕರ್ ವೃತ್ತದಿಂದ ತಹಶಿಲ್ದಾರರ ಕಛೇರಿ ವರೆಗೆ ಹೊಸಪೇಟೆ ಬ್ಲಾಕ್ ಕಾಂಗ್ರೆಸ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು, ತಹಶಿಲ್ದಾರರ ಕಛೇರಿ ಎದುರು ಪ್ರತಿಭಟನೆ ನಡೆಸಿ, ನಂತರ ತಹಶಿಲ್ದಾರರ ಮೂಲಕ ರಾಷ್ಟ್ರಪತಿಗಳಿಗೆ ಮನವಿಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕಾಂಗ್ರೆಸ್ ಕಾರ್ಮಿಕ ಘಟಕದ ಜಿಲ್ಲಾಧ್ಯಕ್ಷ ಡಿ.ವೆಂಕಟರಮಣ, ಸ್ವತಂತ್ರ ಹಾಗೂ ಪಾರದರ್ಶಕ ವಾಗಿ ಕಾರ್ಯನಿರ್ವಹಿಸ ಗಮನಿಸಿದರೆ ಚುನಾವಣಾ ಅಯೋಗದ ಮೇಲಿನ ವಿಶ್ವಾಸ ಕುಸಿಯುವಂತೆ ಮಾಡಿದೆ. ಸಾರ್ವಜನಿಕರ ಹಿತಾಸಕ್ತಿಯನ್ನು ಕಾಯುವಲ್ಲಿ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿಫಲರಾಗಿದ್ದಾರೆ. ಈ ಹಿನ್ನಲೆಯಲ್ಲಿ ಚುನಾವಣಾ ಆಯುಕ್ತರು ತಮ್ಮ ಹುದ್ದೆಗೆ ರಾಜೀನಾಮೆ ನೀಡಬೇಕು. ಹಾಗೂ ಎಸ್.ಐ.ಆರ್ ಪ್ರಕ್ರಿಯೆಯನ್ನು ರದ್ದುಗೊಳಿಸುವಂತೆ ಒತ್ತಾಯಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಕುಮಾರ್, ವಕೀಲ ಹೆಚ್.ಮಹೇಶ್ ಮಾತನಾಡಿ, ಚುನಾವಣಾ ಅಕ್ರಮಗಳಲ್ಲಿ ಭಾಗಿಯಾಗಿರುವ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆ ನೀಡಬೇಕು. ಹಾಗೂ ಎಸ್. ಅರ್.ಪ್ರಕ್ರಿಯೆಯನ್ನು ರದ್ದುಗೊಳಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಹುಡಾ ಅಧ್ಯಕ್ಷ ಹೆಚ್.ಎನ್.ಮಹಮದ್ ಇಮಾಮ್ ನಿಯಾಜಿ, ನಗರಸಭೆ ಸದಸ್ಯ ಕಾರಪುಡಿ ಮಹೇಶ್, ಮಾಜಿ ಸದಸ್ಯ ಪಲ್ಲೇದ ಸಿದ್ದೇಶ್, ಮುಖಂಡ ರಾದ ಎಲ್.ಸಿದ್ದನಗೌಡ, ಕೆ.ಬಡಾವಲಿ, ಯೋಗಲಕ್ಷ್ಮಿ, ಸೋಮಶೇಖರ್ ಬಣ್ಣದಮನೆ ಸೇರಿದಂತೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

### ಉಜ್ಜಿನಿ ಭಾಗದ ಮುಖಂಡರೊಂದಿಗೆ ಶಾಸಕರ ಸೌಹಾರ್ದ ಭೇಟಿ

## ಪ್ರಸಕ್ತ ವಿದ್ಯಮಾನಗಳ ಕುರಿತು ಚರ್ಚೆ



ಕೂಡ್ಲಿಗಿ, 12– ದಿವಂಗತ ಮಾಜಿ ಶಾಸಕರಾದ ಎನ್.ಟಿ. ಬೊಮ್ಮಣ್ಣನವರ ನಾಲ್ಕನೇ ವರ್ಷದ ಪುಣ್ಯಸ್ಮರಣೆಯ ಸಂದರ್ಭದಲ್ಲಿ, ಮಾನ್ಯ ಶಾಸಕರಾದ ಡಾ. ಶ್ರೀನಿವಾಸ್ ಎನ್.ಟಿ. ಅವರನ್ನು ಉಜ್ಜಿನಿ ಭಾಗದ ಮುಖಂಡರು ಸೌಹಾರ್ದಯುತವಾಗಿ ಭೇಟಿ ಮಾಡಿದರು.

ಈ ಸಂದರ್ಭದಲ್ಲಿ ಪರಸ್ಪರ ಆತ್ಮೀಯವಾಗಿ ಮಾತುಕತೆ ನಡೆಸಿದ ಮುಖಂಡರು, ಕ್ಷೇತ್ರದ ಪ್ರಸಕ್ತ ವಿದ್ಯಮಾನಗಳು, ಸ್ಥಳೀಯ ಬೆಳವಣಿಗೆಗಳು ಹಾಗೂ ವಿವಿಧ ಸಾರ್ವಜನಿಕ ವಿಚಾರಗಳ ಕುರಿತು ಚರ್ಚಿಸಿದರು. ಈ ಸೌಹಾರ್ದ ಭೇಟಿ ಪರಸ್ಪರ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸುವುದರೊಂದಿಗೆ, ಕ್ಷೇತ್ರದ ಬೆಳವಣಿಗೆಗಳ ಕುರಿತು ವಿಚಾರ ವಿನಿಮಯಕ್ಕೂ ವೇದಿಕೆಯಾಯಿತು.

## ಹಿರೇಹಡಗಲಿಯಲ್ಲಿ 3.80 ಲಕ್ಷ ಮೌಲ್ಯದ ಪಡಿತರ ಅಕ್ಕಿ ಅಕ್ರಮ ಸಾಗಾಟ ಪತ್ತೆ ಲಾರಿ ವಶಕ್ಕೆ



ಹೂವಿನಹಡಗಲಿ, 12– ತಾಲೂಕಿನ ಹಿರೇಹಡಗಲಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅಕ್ಟೋಬರ್ 9 ರಂದು ಕೆಎ 25, ಎಬಿ 7157 ಸಂ–ಖ್ಯೆಯ ವಾಹನವನ್ನು ಪರಿಶೀಲಿಸಿದಾಗ ಅಕ್ರಮವಾಗಿ ಸಾಗಿಸುತ್ತಿದ್ದ 3,80,587 ರೂ. ಮೌಲ್ಯದ ಒಟ್ಟು 169.15 ಕ್ವಿಂಟಾಲ್ ಪಡಿತರ ಅಕ್ಕಿ ಮೂಟೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಹೂವಿನಹಡಗಲಿ ತಾಲೂಕಿನ ಆಹಾರ ನಿರೀಕ್ಷಕ ನವೀನ್ ಕೆ.ಆರ್. ಅವರು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ ಬಡವರಿಗೆ ನೀಡುವ ಈ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಬಳ್ಳಾರಿ ಜಿಲ್ಲೆಯ ಬೇರಡೆಗೆ ಸಾಗಿಸಲಾಗುತ್ತಿತ್ತು. ಮೂಟೆಗಟ್ಟಲೆ ಅಕ್ಕಿಯನ್ನು ಅಕ್ರಮವಾಗಿ ಸಾಗಿಸುವುದು ಕಾನೂನಿನ ಪ್ರಕಾರ ನಿಯಮಬಾಹಿರವಾಗಿದೆ.

ಈ ಸಂಬಂಧ ಹಿರೇಹಡಗಲಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಆಹಾರ ಇಲಾಖೆ ಮನವಿ ಮಾಡಿದೆ.

# ರಾಹುಲ್ ಜೊತೆ ಕೆಫೆ ಮೀಟಿಂಗ್, ಮೋದಿ ಜೊತೆ ಮೆಟ್ರೋ ಪ್ರಯಾಣ: ರಾಷ್ಟ್ರ ರಾಜಕಾರಣದಲ್ಲಿ ಗಮನಸೆಳೆದ ದಳಪತಿ ವಿಜಯ್ ನಡೆ



ಚೆನ್ನೈ, 12-ಒಂದೆಡೆ ಮಿತ್ರಪಕ್ಷ ಕಾಂಗ್ರೆಸ್‌ನ ನಾಯಕ ರಾಹುಲ್ ಗಾಂಧಿಯೊಂದಿಗೆ ಕೆಫೆಯಲ್ಲಿ ಸಭೆ ಮತ್ತೊಂದೆಡೆ ಮರುದಿನವೇ ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ ಮೆಟ್ರೋ ಪ್ರಯಾಣ ಹಾಗೂ ದೇವಾಲಯ ಭೇಟಿ ತಮಿಳುನಾಡು ಮುಖ್ಯಮಂತ್ರಿ ವಿಜಯ್ ಅವರ ಈ ರಾಜಕೀಯ ಸಮತೋಲನವು ರಾಷ್ಟ್ರೀಯ ಮತ್ತು ಪ್ರಾದೇಶಿಕ ರಾಜಕೀಯ ವಲಯದಲ್ಲಿ ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಚೆನ್ನೈ ಮೆಟ್ರೋ ರೈಲು ಹಂತ-1ರ ಪೂನಮಲ್ಲಿ-ವಡಪಳನಿ ಮಾರ್ಗಕ್ಕೆ ಚಾಲನೆ ನೀಡಿದ ಬಳಿಕ ಪ್ರಧಾನಿ ಮೋದಿಯವರೊಂದಿಗೆ ಸಿಎಂ ವಿಜಯ್ ಮೆಟ್ರೋದಲ್ಲಿ ಪ್ರಯಾಣ ಬೆಳೆಸಿದ್ದಲ್ಲದೆ, ಐಐಟಿ ಮದ್ರಾಸ್ ಆವರಣದಲ್ಲಿರುವ ಜಲಕಂಠೇಶ್ವರ ಸ್ವಾಮಿ ದೇವಾಲಯಕ್ಕೂ ಇವ್ವರು ಒಟ್ಟಿಗೆ ಭೇಟಿ ನೀಡಿದ್ದರು. ಸುಮಾರು 13,000 ಕೋಟಿ ರೂ., ಮೌಲ್ಯದ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದ್ದಾರೆ.

ಸಂಶಯಗಳಿಗೆ ತೆರೆ: ತಮಿಳುನಾಡಿನಲ್ಲಿ ಟಿವಿಕೆ ಸರ್ಕಾರ-ಕ್ಕೆ ಬೆಂಬಲ ನೀಡಿರುವ ಕಾಂಗ್ರೆಸ್ ಜತೆ ಎಲ್ಲವೂ ಸರಿಯಿಲ್ಲ ಎಂಬ ಮಾತುಗಳು ಹರಿದಾಡುತ್ತಿದ್ದ ನಡುವೆಯೇ, ರಾಹುಲ್ ಗಾಂಧಿ ಅವರೊಂದಿಗೆ ನಡೆದ ಭೋಜನ ಕೂಟ ಮೈತ್ರಿಯ ಬಲವನ್ನು ಪ್ರದರ್ಶಿಸಿತು. ತಮಿಳುನಾಡು ಮುಖ್ಯಮಂತ್ರಿ ವಿಜಯ್ ರಾಹುಲ್ ಗಾಂಧಿ ಜೊತೆ ಕೆಫೆ ಸಭೆ, ಮರುದಿನವೇ ಪ್ರಧಾನಿ ಮೋದಿ ಜೊತೆ ಮೆಟ್ರೋ ಪ್ರಯಾಣ ಕೈಗೊಂಡರು. ಇದು ರಾಜ್ಯ ಮತ್ತು ರಾಷ್ಟ್ರೀಯ ರಾಜಕೀಯದಲ್ಲಿ ಗಮನಸೆಳೆದಿದೆ. ಮೈತ್ರಿ ಬಲ ಮತ್ತು ರಾಜ್ಯದ ಅಭಿವೃದ್ಧಿ ಯೋಜನೆಗಳಿಗಾಗಿ ಕೇಂದ್ರದೊಂದಿಗೆ ಸೌಹಾರ್ದ ಸಂಬಂಧ ಕಾಯ್ದುಕೊಳ್ಳುವ ವಿಜಯ್ ಅವರ ರಾಜಕೀಯ ಸಮತೋಲನವನ್ನು ಈ ಘಟನೆಗಳು ಎತ್ತಿ ತೋರಿಸುತ್ತವೆ.

2029ರ ಪ್ರಧಾನಿ ರೇಸ್ ವಿವಾದ: ಟಿವಿಕೆಯ ಕೆಲ ಮುಖಂಡರು "2029ಕ್ಕೆ ವಿಜಯ್ ಪ್ರಧಾನಿ" ಎಂದು ಬಿಂಬಿಸುತ್ತಿರುವುದು ಕಾಂಗ್ರೆಸ್‌ಗೆ ಅಸಮಾಧಾನ ತಂದಿತ್ತು. ಕಾಂಗ್ರೆಸ್ ರಾಹುಲ್ ಗಾಂಧಿಯವರನ್ನು ಪ್ರಧಾನಿ ಅಭ್ಯರ್ಥಿ ಎಂದು ಬಿಂಬಿಸುತ್ತಿರುವಾಗ, ಈ ಭೇಟಿಯು ಇಬ್ಬರು ನಾಯಕರ ನಡುವಿನ ಸ್ನೇಹ ಹಾಗೂ ಒಡನಾಟವನ್ನು ತೋರಿಸುವ ವೇದಿಕೆಯಾಗಿತ್ತು.

ಮೋದಿ ಜೊತೆ ಸೌಹಾರ್ದ: ಆಡಳಿತಾತ್ಮಕ ಸಹಕಾರ, ಸೈದ್ಧಾಂತಿಕ ಭಿನ್ನಾಭಿಪ್ರಾಯ

ಸೈದ್ಧಾಂತಿಕ ವಿರೋಧಿ, ಆದರೆ ಅಭಿವೃದ್ಧಿ ಮುಖ್ಯ: ಟಿವಿಕೆ ಸೈದ್ಧಾಂತಿಕವಾಗಿ ಬಿಜೆಪಿಯನ್ನು ತನ್ನ ಪ್ರಮುಖ ವಿರೋಧಿ ಎಂದು ಘೋಷಿಸಿಕೊಂಡಿದ್ದರೂ, ಮುಖ್ಯಮಂತ್ರಿಯಾಗಿ ರಾಜ್ಯದ ಹಿತಾಸಕ್ತಿ, ಕೇಂದ್ರದ ಅನುದಾನ ಮತ್ತು ಯೋಜನೆಗಳಿಗಾಗಿ ಕೇಂದ್ರ ಸರ್ಕಾರದೊಂದಿಗೆ ಸೌಹಾರ್ದಯುತ ಸಂಬಂಧ ಕಾಯ್ದುಕೊಳ್ಳುವುದು ಅನಿವಾರ್ಯ ಎಂಬುದನ್ನು ವಿಜಯ್ ತೋರಿಸಿಕೊಟ್ಟಿದ್ದಾರೆ.

ಸಚಿವ ನಿರ್ಮಲ್ ಕುಮಾರ್ ಸಮರ್ಥನೆ: "ರಾಹುಲ್ ಜೊತೆಗಿನ ಭೇಟಿ ನಮ್ಮ ಮೈತ್ರಿ ರಾಜಕೀಯ ಸಭೆಯಾದರೆ, ಮೋದಿ ಜೊತೆಗಿನ ಭೇಟಿ ರಾಜ್ಯದ ಅಭಿವೃದ್ಧಿಗಾಗಿ ನಡೆದ ಅಧಿಕೃತ ಸರ್ಕಾರಿ ಕಾರ್ಯಕ್ರಮ" ಎಂದು ಸಚಿವರು ಸ್ಪಷ್ಟಪಡಿಸಿದ್ದಾರೆ.

ಮೋದಿಯವರ ಸಮಾಧಾನಕರ ಮಾತು: "ನಾನು ಜಯಲಲಿತಾ, ಇಪಿಎಸ್ ಮತ್ತು ಸ್ಟಾಲಿನ್ ಅವರ ಜೊತೆ ಕೆಲಸ ಮಾಡಿದ್ದೇನೆ. ಅಧಿಕಾರ ಬದಲಾದರೂ ತಮಿಳುನಾಡಿನ ಅಭಿವೃದ್ಧಿಗೆ ಕೈಜೋಡಿಸುವ ನನ್ನ ಬದ್ಧತೆ ಸಿಎಂ ವಿಜಯ್ ಅವರೊಂದಿಗೂ ಮುಂದುವರೆಯುತ್ತದೆ" ಎಂದು ಪ್ರಧಾನಿ ಮೋದಿ ಹೇಳಿದರು.

ಕೇಂದ್ರದ ಮುಂದಿಟ್ಟ ಪ್ರಮುಖ ಬೇಡಿಕೆಗಳುಸಿಎಂ ವಿಜಯ್ ಅವರು ರಾಜ್ಯದ ಪರವಾಗಿ ಪ್ರಧಾನಿ ಮೋದಿಯವರಿಗೆ ಮಹತ್ವದ ಬೇಡಿಕೆಗಳ ಪಟ್ಟಿಯನ್ನು ಸಲ್ಲಿಸಿದರು. ಮೆಟ್ರೋ ವಿಸ್ತರಣೆ: ಚೆನ್ನೈ ಮೆಟ್ರೋ ಹಂತ-3ಕ್ಕೆ ಅನುಮೋದನೆ, ಮಧುರೈ ಮತ್ತು ಕೊಯಮತ್ತೂರು ಮೆಟ್ರೋ ಯೋಜನೆಗಳು. ಹೊಸೂರು-ಬೊಮ್ಮಸಂದ್ರ ಇಂಟರ್‌ಸ್ಟೇಟ್ ಮೆಟ್ರೋ: ತಮಿಳುನಾಡಿನ ಹೊಸೂರು ಮತ್ತು ಬೆಂಗಳೂರಿನ ಬೊಮ್ಮಸಂದ್ರ ನಡುವಿನ ಅಂತರರಾಜ್ಯ ಮೆಟ್ರೋ ಸಂಪರ್ಕಕ್ಕೆ ಅನುಮತಿ. ಅನುದಾನ ಬಿಡುಗಡೆ: ಕೇಂದ್ರದಿಂದ ತಡೆಹಿಡಿಯಲಾಗಿರುವ ಸಮಗ್ರ ಶಿಕ್ಷಣ ಅಭಿಯಾನ ಸೇರಿದಂತೆ ಬಾಕಿ ಅನುದಾನಗಳ ಬಿಡುಗಡೆ. ಮದ್ರಾಸ್ ಹೈಕೋರ್ಟ್ ಭಾಷೆ: ಮದ್ರಾಸ್ ಹೈಕೋರ್ಟ್‌ನ ಅಧಿಕೃತ ಕಲಾಪಗಳ ಭಾಷೆಯಾಗಿ ತಮಿಳನ್ನು ಘೋಷಿಸುವುದು. ಹೆದ್ದಾರಿ ಯೋಜನೆಗಳು: ರಾಜ್ಯದ 3 ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳನ್ನು 6 ಪಥಗಳನ್ನಾಗಿ ಮೇಲ್ದರ್ಜೆಗೇರಿಸುವುದು.

ವಿಜಯ್ ನಡೆಗೆ ರಾಜಕೀಯ ಮಹತ್ವವೇನು? ಒಂದೆಡೆ ಡಿಎಂ-ಕೆ-ಎಐಎಡಿಎಂಕೆ ಪ್ರಾದೇಶಿಕ ರಾಜಕಾರಣದಿಂದ ಆಚೆಗೆ ನಿಂತು, ಕಾಂಗ್ರೆಸ್ ಜೊತೆಗಿನ ಮೈತ್ರಿಯನ್ನು ಸುಭದ್ರವಾಗಿಟ್ಟುಕೊಳ್ಳುವುದು. ಇನ್ನೊಂದೆಡೆ ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರದೊಂದಿಗೆ ಸಂಘರ್ಷಕ್ಕಿಳಿಯದೆ ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ವೇಗ ನೀಡುವುದು. ಈ ಎರಡೂ ತಂತ್ರಗಳನ್ನು ಒಂದೇ ವಾರಾಂತ್ಯದಲ್ಲಿ ವಿಜಯ್ ಸಲೀಸಾಗಿ ನಿರ್ವಹಿಸಿದ್ದಾರೆ. ಇದು ಅವರ ಪ್ರಬುದ್ಧ ಆಡಳಿತ ಹಾಗೂ ಭವಿಷ್ಯದ ರಾಜಕೀಯ ಮಹತ್ವಾಕಾಂಕ್ಷೆಗಳ ಸ್ಪಷ್ಟ ಮುನ್ಸೂಚನೆಯಾಗಿದೆ.

# ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಸಮಿತಿಯಿಂದ 'ಜೀವನ ದರ್ಶನ' ಉಪನ್ಯಾಸ-ಸನ್ಮಾನ
## ಹಬ್ಬಗಳು ಸಂಸ್ಕೃತಿ, ಸಾಮರಸ್ಯದ ಸಂಕೇತವಾಗಿವೆ: ಶಾಂತಲಿಂಗ ಮಹಾಸ್ವಾಮಿಗಳು



ಗದಗ, 12- ಹಬ್ಬ-ಹರಿದಿನಗಳು ಕೇವಲ ಧಾರ್ಮಿಕ ಆಚರಣೆಗಳಲ್ಲ; ಅವು ಮಾನವೀಯ ಮೌಲ್ಯ, ಸಹೋದರತ್ವ ಮತ್ತು ಸಾಂಸ್ಕೃತಿಕ ಪರಂಪರೆಯ ಪ್ರತೀಕಗಳಾಗಿವೆ. ಹಬ್ಬಗಳ ಮೂಲ ಆಶಯವನ್ನು ಅರಿತು, ಅವುಗಳ ಪಾವಿತ್ರ್ಯವನ್ನು ಉಳಿಸಿಕೊಂಡು ಮುಂದಿನ ಪೀಳಿಗೆಗೆ ಸಂಸ್ಕಾರ ನೀಡಬೇಕು ಎಂದು ಶಿರೋಳ-ಭೈರನಹಟ್ಟಿಯ ತೋಂಟದಾರ್ಯ ಮಠ ಹಾಗೂ ದೊರೆಸ್ವಾಮಿ ವಿರಕ್ತಮಠದ ಪೂಜ್ಯ ಶಾಂತಲಿಂಗ ಮಹಾಸ್ವಾಮಿಗಳು ಹೇಳಿದರು.ಗದುಗಿನ ವಿವೇಕಾನಂದ ನಗರದ ಕಾಶೀ ವಿಶ್ವನಾಥ ದೇವಸ್ಥಾನದ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಭವನದಲ್ಲಿ ಶ್ರೀ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಸಮಿತಿ ಏರ್ಪಡಿಸಿದ್ದ 'ಜೀವನ ದರ್ಶನ' 63ನೇ ಮಾಲಿಕೆ ಹಾಗೂ ಕಾಶೀ ವಿಶ್ವನಾಥನ ಪಾಲಕಿ ಸೇವೆ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

12ನೇ ಶತಮಾನದ ಬಸವಾದಿ ಶಿವಶರಣರು ವಚನಗಳ ಮೂಲಕ ಸಮಾನತೆ, ಸಹಬಾಳ್ವೆ ಮತ್ತು ಸರ್ವರ ಕಲ್ಯಾಣದ ಸಂದೇಶ ಸಾರಿದರು. ಮಹಿಳೆಯರಿಗೆ ಗೌರವಯುತ ಸ್ಥಾನ ಕಲ್ಪಿಸಿ, ಸಾಮಾಜಿಕ ಅಸಮಾನತೆಯ ವಿರುದ್ಧ ಧ್ವನಿ ಎತ್ತಿದರು. ಅಕ್ಕಮಹಾದೇವಿ, ಮುಕ್ತಾಯಕ್ಕ ಸೇರಿದಂತೆ ಶರಣೆಯರ ವಚನಗಳು ಮಹಿಳಾ ಸ್ವಾತಂತ್ರ್ಯ ಮತ್ತು ಸಾಮಾಜಿಕ ಪ್ರಜ್ಞೆಗೆ ಸಾಕ್ಷಿಯಾಗಿವೆ. ಶರಣರ ಸಮಾನತೆಯ ಆಶಯಗಳು ಸಂವಿಧಾನದ ಮೌಲ್ಯಗಳೊಂದಿಗೂ ಸಾಮ್ಯ ಹೊಂದಿವೆ ಎಂದರು.

ನಾಡಿನ ಹಬ್ಬಗಳು ಜನಪದ ಸಂಸ್ಕೃತಿಯ ಜೀವಂತ ಅಭಿವ್ಯಕ್ತಿಗಳಾಗಿವೆ. ಹಬ್ಬಗಳೊಂದಿಗೆ ಬೆಸೆದುಕೊಂಡಿರುವ ಜನಪದ ಗೀತೆಗಳು ಗ್ರಾಮೀಣ ಬದುಕು, ತಾಯಿಯ ಮಮತೆ, ಕುಟುಂಬದ ಬಾಂಧವ್ಯ ಮತ್ತು ಪ್ರಕೃತಿಯೊಂದಿಗಿನ ಸಂಬಂಧವನ್ನು ಅನಾವರಣಗೊಳಿಸುತ್ತವೆ. ಜನಪದ ಸಾಹಿತ್ಯ ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದೆ.

ಇಂತಹ ಅಮೂಲ್ಯ ಪರಂಪರೆಯನ್ನು ಉಳಿಸಿ ಬೆಳೆಸಬೇಕಿದೆ ಎಂದರು.

ಕುಟುಂಬದಲ್ಲಿ ಸಂಸ್ಕೃತಿ ಮತ್ತು ಸಂಸ್ಕಾರವನ್ನು ಬೆಳೆಸುವಲ್ಲಿ ತಾಯಂದಿರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಮಕ್ಕಳಿಗೆ ಹಿರಿಯರ ಗೌರವ, ಮಾನವೀಯತೆ, ಪರೋಪಕಾರ ಮತ್ತು ಸಹಬಾಳ್ವೆಯ ಗುಣಗಳನ್ನು ಕಲಿಸುವ ಹೊಣೆಗಾರಿಕೆ ತಾಯಂದಿರ ಮೇಲಿದೆ. ಹಬ್ಬಗಳ ಸಂಪ್ರದಾಯ ಮತ್ತು ಪಾವಿತ್ರ್ಯವನ್ನು ಉಳಿಸಿಕೊಂಡು, ಅವುಗಳ ಹಿಂದಿರುವ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ತಲುಪಿಸಬೇಕು ಎಂದರು.

ಸಹಕಾರ ಕ್ಷೇತ್ರದ ಪಿತಾಮಹ ಸಿದ್ದನಗೌಡ ಪಾಟೀಲರ ಉದಾರತೆ, ಸಾಮಾಜಿಕ ಕಳಕಳಿ ಮತ್ತು ದೂರದೃಷ್ಟಿಯನ್ನು ಸ್ಮರಿಸಿದ ಶ್ರೀಗಳು, ಸಮಾಜದ ಎಲ್ಲ ವರ್ಗದವರನ್ನು ಸಮಾನವಾಗಿ ಕಾಣುವ ಹಾಗೂ ಬಡವರಿಗೆ ನೆರವಾಗುವ ಅವರ ಬದುಕು ಅನುಕರಣೀಯವಾಗಿದೆ. ಸಿ.ಕೆ.ಮಾಳಶೆಟ್ಟಿ ಅವರು ಪ್ರಸ್ತಾಪಿಸಿದಂತೆ ಸಿದ್ಧನಗೌಡ ಪಾಟೀಲ ಸಾಧನೆಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸಲು ಪ್ರತಿಮೆ ಸ್ಥಾಪನೆಗೆ ಎಲ್ಲರೂ ಸಹಕಾರ ನೀಡಬೇಕು ಎಂದರು.

ಸಂಪನ್ಮೂಲ ವ್ಯಕ್ತಿ ಕವಿತಾ ದಂಡಿನ ಅವರು 'ಮಹಿಳೆಯರು ಮತ್ತು ಹಬ್ಬಹರಿದಿನಗಳು' ವಿಷಯವಾಗಿ ಮಾತನಾಡಿ ಹಬ್ಬ ಹರಿದಿನಗಳು ಕೇವಲ ಧಾರ್ಮಿಕ ಆಚರಣೆಗಳಲ್ಲ; ಅವು ಕುಟುಂಬದ ಸದಸ್ಯರನ್ನು ಒಂದುಗ-ೂಡಿಸಿ, ಪ್ರೀತಿ, ವಿಶ್ವಾಸ, ಸಹಕಾರ ಹಾಗೂ ಸಂಸ್ಕಾರಗಳನ್ನು ಬೆಳೆಸುವ ಶಕ್ತಿಕೇಂದ್ರಗಳಾಗಿವೆ ಎಂದರು.

ಭಾರತೀಯ ಸಂಸ್ಕೃತಿಯ ಸಂರಕ್ಷಣೆ ಹಾಗೂ ಮುಂದಿನ ಪೀಳಿಗೆಗೆ ಕುಟುಂಬದ ಮೌಲ್ಯಗಳನ್ನು ಪರಿಚಯಿಸುವಲ್ಲಿ ಮಹಿಳೆಯರ ಪಾತ್ರ ಮಹತ್ವದ್ದಾಗಿದೆ. ಹಬ್ಬಗಳು ಮನಸ್ತಾಪಗಳನ್ನು ಮರೆತು ಸಂಬಂಧಗಳನ್ನು ಬೆಸೆಯುವ, ಧಾರ್ಮಿಕ ಮಹತ್ವದ ಜೊತೆಗೆ ವೈಜ್ಞಾನಿಕ ಮನೋಭಾವವೂ ಅಡಕವಾಗಿದೆ ಎಂದರು.

ಸಹಕಾರ ಸೇವಾ ರತ್ನ ಪ್ರಶಸ್ತಿ ಪುರಸ್ಕೃತರಾದ ಸಿ.ಕೆ.ಮಾಳಶೆಟ್ಟಿ ಹಾಗೂ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರಾದ ರಮೇಶ ಚಲವಾದಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಸನ್ಮಾನಿತರಾದ ಮಾಳಶೆಟ್ಟಿ ಅವರು ಮಾತನಾಡಿ ಸಹಕಾರ ಕ್ಷೇತ್ರದ ಪಿತಾಮಹ ಸಿದ್ದನಗೌಡ ಪಾಟೀಲರ ಪುತ್ಥಳಿಯನ್ನು ಗದುಗಿನಲ್ಲಿ ಸ್ಥಾಪಿಸುವ ಉದ್ದೇಶವಿದ್ದು ಈ ಮಹಾನ್ ಕಾರ್ಯ-ಕ್ಕೆ ಎಲ್ಲರೂ ಕೈಜೋಡಿಸಬೇಕೆಂದರು. ಅಧ್ಯಕ್ಷತೆ ವಹಿಸಿದ್ದ ಸಮಿತಿಯ ಅಧ್ಯಕ್ಷ ನಿವೃತ್ತ ತಹಶೀಲ್ದಾರ ಎ.ಟಿ.ನರೇಗಲ್ಲ ಅವರು ಸಮಿತಿಯ ನಡೆದು ಬಂದ ದಾರಿ, ಕಾರ್ಯಚಟುವಟಿಕೆಗಳನ್ನು ವಿವರಿಸಿದರು.

ಪ್ರಸಾದ ಸೇವೆ ವಹಿಸಿಕೊಂಡಿದ್ದ ಗದಗ-ಬೆಟಗೇರಿ ನಗರಸಭೆಯ ನಿವೃತ್ತ ಪೌರಾಯುಕ್ತ ಜಗದೀಶಚ್ಚಂದ್ರ ನಾಡಗೌಡರ, ನಿವೃತ್ತ ಶಿಕ್ಷಕ ದೇವೇಂದ್ರಪ್ಪ ಅಂಗಡಿ, ನಿವೃತ್ತ ನೌಕರ ಜಿ.ವ್ಹಿ.ಇಟಗಿ ಅವರನ್ನು ಪೂಜ್ಯರು ಸನ್ಮಾನಿಸಿದರು. ವೇದಿಕೆಯ ಮೇಲೆ ಸಮಿತಿಯ ಉಪಾಧ್ಯಕ್ಷ ಆರ್.ಆರ್.ಕಾಶಪ್ಪನವರ ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ವ್ಹಿ.ಬಿ.ತಿರ್ಲಾಪೂರ ನಿಧನಕ್ಕೆ ಸಂತಾಪ ಸಲ್ಲಿಸಲಾಯಿತು. ವಿಶಾಲಾಕ್ಷೀ ಕಲ್ಲನಗೌಡ್ರ ಪ್ರಾರ್ಥಿಸಿದರು ಕಾರ್ಯದರ್ಶಿ ಕೆ.ಪಿ.ಗುಳಗೌಡ್ರ ಸ್ವಾಗತಿಸಿ ಪರಿಚಯಿಸಿದರು. ಬಿ.ಎಚ್. ಗರಡಿಮನಿ ನಿರೂಪಿಸಿದರು ಕೊನೆಗೆ ಸಂಗೀತಾ ಕುರಿ ವಂದಿಸಿದರು.ಸುದರ್ಶನ ಹಾನಗಲ್ಲ, ಎಸ್.ಎಸ್.ಪಾಳೇಗಾರ, ಆರ್.ಬಿ.ಅಂದಪ್ಪನವರ, ವ್ಹಿ.ಆರ್. ಗೊಬ್ಬರಗುಂಪಿ, ಸಾಗರ ಬಿಂಗಿ, ಎಸ್. ಎಸ್.ಪಾಟೀಲ, ಪ್ರಾ.ವ್ಹಿ.ವೈ.ಮಕ್ಕಣ್ಣವರ, ಡಾ.ಎಂ.ಎನ್.ಕಾಮನಹಳ್ಳಿ, ಡಾ.ಎಸ್. ಎನ್.ವೆಂಕಟಾಪೂರ, ಕೆ.ಬಿ.ಕೊಣ್ಣೂರ, ಪ್ರೇಮಾ ಗುಳಗೌಡ್ರ, ಪುಷ್ಪಾ ಭಂಡಾರಿ, ಕವಿತಾ ಹಾದಿ ಸೇರಿದಂತೆ ಗಣ್ಯರು ಪಾಲ್ಗೊಂಡಿದ್ದರು. ಕಾರ್ಯಕ್ರಮಕ್ಕೂ ಮುನ್ನ ಕಾಶೀ ವಿಶ್ವನಾಥನ ಪಾಲಕಿ ಸೇವೆ ಶ್ರದ್ಧಾಭಕ್ತಿಯಿಂದ ಜರುಗಿತು.

# ರೋಟರಿ ಕ್ಲಬ್‌ದಿಂದ ಇ-ತ್ಯಾಜ್ಯ ಸಂಗ್ರಹ ಅಭಿಯಾನ




ಗದಗ, 12- ಪರಿಸರ ಮಾಲಿನ್ಯ ತಡೆಗಟ್ಟುವ ಹಾಗೂ ಸ್ವಚ್ಛ, ಆರೋಗ್ಯಕರ ಮತ್ತು ಹಸಿರು ಸಮಾಜ ನಿರ್ಮಿಸುವ ಉದ್ದೇಶದಿಂದ ರೋಟರಿ ಕ್ಲಬ್ ಗದಗ-ಬೆಟಗೇರಿ ವತಿಯಿಂದ ಅಕ್ಟೋಬರ್ 11 ರಿಂದ 17ರವರೆಗೆ ಇ-ತ್ಯಾಜ್ಯ ಸಂಗ್ರಹ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಕ್ಲಬ್ ಅಧ್ಯಕ್ಷ ಡಾ.ಪ್ರದೀಪ ಉಗಲಾಟ ತಿಳಿಸಿದ್ದಾರೆ.

ಅಭಿಯಾನದ ಅಂಗವಾಗಿ ಅಕ್ಟೋಬರ್ 12ರ ಸೋಮವಾರ ಬೆಳಿಗ್ಗೆ 10.30ಕ್ಕೆ ಗದಗದ ರೋಟರಿ ಐ ಕೇರ್ ಸೆಂಟರ್‌ನಲ್ಲಿ ಕಾರ್ಯಕ್ರಮ ನಡೆಯಲಿದೆ. ಸಾರ್ವಜನಿಕರು ತಮ್ಮ ಮನೆಗಳಲ್ಲಿ ಹಾಗೂ ಕಚೇರಿಗಳಲ್ಲಿ ಬಳಕೆಯಾಗದೆ ಉಳಿದಿರುವ ಹಳೆಯ ಎಲೆಕ್ಟ್ರಾನಿಕ್ ವಸ್ತುಗಳನ್ನು ವಿಲೇವಾರಿ ಮಾಡುವ ಮೂಲಕ ಅಭಿಯಾನದಲ್ಲಿ ಕೈಜೋಡಿಸಬೇಕೆಂದು ಸಂಘಟಕರು ಮನವಿ ಮಾಡಿದ್ದಾರೆ. ಮೊಬೈಲ್ ಫೋನ್‌ಗಳು, ಲ್ಯಾಪ್‌ಟಾಪ್‌ಗಳು, ಕಂಪ್ಯೂಟರ್‌ಗಳು, ಪ್ರಿಂಟರ್‌ಗಳು, ಸ್ಕ್ಯಾನರ್‌ಗಳು, ಮಾನಿಟರ್‌ಗಳು, ಟಿವಿಗಳು, ಚಾರ್ಜರ್‌ಗಳು, ಕೇಬಲ್‌ಗಳು, ಬ್ಯಾಟರಿಗಳು, ಕೀಬೋರ್ಡ್‌ಗಳು, ಮೌಸ್‌ಗಳು, ಸಣ್ಣ ವಿದ್ಯುತ್ ಉಪಕರಣಗಳು ಹಾಗೂ ಇತರ ಎಲೆಕ್ಟ್ರಾನಿಕ್ ಪರಿಕರಗಳನ್ನು ಸಂಗ್ರಹಿಸಲಾಗುತ್ತದೆ.

ಗದಗ ಜಿಲ್ಲಾ ಕ್ರೀಡಾಂಗಣ ಎದುರಿಗೆ ಇರುವ ಉಷಾದೇವಿ ಜಿ. ಕುಸ್ಟಗಿ ರೋಟರಿ ಕಮ್ಯುನಿಟಿ ಕೇರ್ ಸೆಂಟರ್‌ದಲ್ಲಿ ಸಂಗ್ರಹ ಕೇಂದ್ರವನ್ನು ತೆರೆಯಲಾಗಿದೆ. ಸಾರ್ವಜನಿಕರು ನಿಗದಿತ ಅವಧಿಯಲ್ಲಿ ತಮ್ಮ ಇ-ತ್ಯಾಜ್ಯವನ್ನು ಇಲ್ಲಿ ನೀಡಬಹುದು.

ಇ-ತ್ಯಾಜ್ಯವನ್ನು ಸಾಮಾನ್ಯ ಕಸದೊಂದಿಗೆ ಬೆರೆಸಿ ಎಸೆಯುವುದರಿಂದ ಪರಿಸರಕ್ಕೆ ಹಾನಿಯಾಗುವ ಸಾಧ್ಯತೆಯಿದೆ. ಆದ್ದರಿಂದ ಇಂತಹ ತ್ಯಾಜ್ಯವನ್ನು ಸೂಕ್ತ ರೀತಿಯಲ್ಲಿ ಸಂಗ್ರಹಿಸಿ ಮರುಬಳಕೆ ಹಾಗೂ ಮರುಸಂಸ್ಕರಣೆಗೆ ಒದಗಿಸುವುದು ಅಗತ್ಯವಾಗಿದೆ. ಇದ-ರಿಂದ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ, ಪರಿಸರ ಮಾಲಿನ್ಯ ನಿಯಂತ್ರಣ ಮತ್ತು ಸ್ವಚ್ಛ ಸಮುದಾಯ ನಿರ್ಮಾಣಕ್ಕೆ ಸಹಕಾರಿಯಾಗಲಿದೆ.

ತೋಂಟದಾರ್ಯ ಎಂಜಿನಿಯರಿಂಗ್ ಕಾಲೇಜಿನ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಪ್ರೊ. ಲೋಹಿತ್ ಜವಳಿ ಹಾಗೂ ಪ್ರಾಧ್ಯಾಪಕಿ ಡಾ. ಶೈಲಜಾ ಮುದೇನಗುಡಿ ಅವರು ಅಭಿಯಾನದ ಸಂಪನ್ಮೂಲ ವ್ಯಕ್ತಿಗಳಾಗಿದ್ದಾರೆ.

ಇನ್ನರ್ ವೀಲ್ ಕ್ಲಬ್ ಗದಗ-ಬೆಟಗೇರಿ, ರೋಟರ್ಯಾಕ್ಟ್ ಕ್ಲಬ್ ಗದಗ-ಬೆಟಗೇರಿ ಹಾಗೂ ವೈಆರ್‌ಸಿ ಕ್ಲಬ್, ಕೆಎಲ್‌ಇ ಆರ್ಟ್ಸ್ ಆ್ಯಂಡ್ ಕಾಮರ್ಸ್ ಕಾಲೇಜು, ಗದಗ ಇವುಗಳು ಅಭಿಯಾನಕ್ಕೆ ಸಹಯೋಗ ನೀಡಿವೆ.

ಇವೆಂಟ್ ಚೇರಮನ್‌ರಾಗಿ ಶ್ರೀಧರ ಸುಲ್ತಾನಪೂರ, ರೋಟರಿ ಕ್ಲಬ್ ಅಧ್ಯಕ್ಷ ಡಾ. ಪ್ರದೀಪ ಎಸ್. ಉಗಲಾಟ, ಕಾರ್ಯದರ್ಶಿ ಅಕ್ಷಯ್ ವಿ. ಶೆಟ್ಟಿ ಅಭಿಯಾನದ ಯಶಸ್ವಿಗೆ ಮುಂದಾಗಿದ್ದು ಸಾರ್ವಜನಿಕರು ಸಹಕಾರ ನೀಡಲು ಮನವಿ ಕ್ಲಬ್ ಮಾಡಿಕೊಂಡಿದೆ.

"ಸಣ್ಣ ಪ್ರಯತ್ನ, ದೊಡ್ಡ ಪರಿಣಾಮ" ಎಂಬ ಆಶಯದೊಂದಿಗೆ ಆಯೋಜಿಸಿರುವ ಈ ಅಭಿಯಾನದಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಇ-ತ್ಯಾಜ್ಯವನ್ನು ಜವಾಬ್ದಾರಿಯುತವಾಗಿ ವಿಲೇವಾರಿ ಮಾಡುವ ಮೂಲಕ ಪರಿಸರ ಸಂರಕ್ಷಣೆಗೆ ಕೈಜೋಡಿಸಬೇಕೆಂದು ರೋಟರಿ ಕ್ಲಬ್ ಮನವಿ ಮಾಡಿದೆ.

# ಜಿಲ್ಲಾ ಪಂಚಾಯತಿ ಹಾಗೂ ತಾಲೂಕು ಪಂಚಾಯತಿಯ ಮೀಸಲಾತಿ ಪಟ್ಟಿ ಪ್ರಕಟಣೆ

ಮುಂಡರಗಿ, 12- ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993(1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ ಪ್ರಕರಣ 123ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ ಸ್ಥಾನಗಳನ್ನು ಆವರ್ತನೆಯ ಮೇಲೆ ಮೀಸಲಿಡುವ) ನಿಯಮಗಳು 2023 ರನ್ವಯ ಸರ್ಕಾರವು ಗದಗ ಜಿಲ್ಲೆಯ ವ್ಯಾಪ್ತಿಯಲ್ಲಿನ ತಾಲ್ಲೂಕು ಪಂಚಾಯಿತಿಗಳಿಗೆ ಈ ಕೆಳಗಿನ ಕೋಷ್ಟಕದ(2)ನೇ ಅಂಕಣದಲ್ಲಿ ನಮೂದಿಸಿರುವ ತಾಲ್ಲೂಕು ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸ್ಥಾನವನ್ನು ಸದರಿ ಕೋಷ್ಠಕದ (3)ನೇ ಅಂಕಣದಲ್ಲಿ ನಮೂದಿಸಿದ ಪ್ರವರ್ಗಕ್ಕೆ ಮೀಸಲಿರಿಸಿದೆ. ಜಿಲ್ಲಾ ಪಂಚಾಯತಿ ಹಾಗೂ ತಾಲೂಕು ಪಂಚಾಯತಿಯ ಮೀಸಲಾತಿ ಪಟ್ಟಿ ಪ್ರಕಟಣೆ ಮಾಡಲಾಗಿದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಲ್ಲಿ ಸ್ಥಾನಗಳನ್ನು ಆವರ್ತನೆಯ ಮೇಲೆ ಮೀಸಲಿಡುವ )ನಿಯಮಗಳು, 2023ರ ನಿಯಮ 6ರನ್ವಯ ಈ ಅಧಿಸೂಚನೆಯು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ 10 (ಹತ್ತು) ದಿವಸಗಳ ಒಳಗಾಗಿ ಅಂದರೆ ದಿನಾಂಕ:19.10.2026 ಸೋಮವಾರ ಸಂಜೆ 5.00 ಗಂಟೆ-ಯ ಒಳಗೆ ಆಕ್ಷೇಪಣೆಗಳನ್ನು ಪೂರಕ ದಾಖಲೆಗಳೊಂದಿಗೆ ಖುದ್ದಾಗಿ/ಅಂಚೆಯ ಮೂಲಕ ಸರ್ಕಾರದ ಕಾರ್ಯದರ್ಶಿ(ಪಂ. ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, 3ನೇ ಹಂತ, 3ನೇ ಮಹಡಿ, ಡಾ॥ ಅಂಬೇಡ್ಕರ್ ವೀದಿ, ಬೆಂಗಳೂರು-560001 ಇವರಿಗೆ ತಲುಪುವಂತೆ ಸಲ್ಲಿಸತಕ್ಕದ್ದು. ಕೊನೆಯ ದಿನಾಂಕದ ನಂತರ ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅಂಚೆ ಮೂಲಕ ಆಕ್ಷೇಪಣೆಗಳು ಈ ಕಚೇರಿಗೆ ಸ್ವೀಕೃತವಾಗಲು ಆಗುವ ವಿಳಂಬಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಜವಾಬ್ದಾರಿಯಾಗುವುದಿಲ್ಲ ಎಂದು ಈ ಮೂಲಕ ತಿಳಿಸಿದೆ.

ಜಿಲ್ಲಾ ಪಂಚಾಯತಿಗೆ ಮುಂಡರಗಿ ತಾಲೂಕಿನಿಂದ 4 ಸ್ಥಾನಗಳಿದ್ದಿ, ಹಮ್ಮಿಗಿ ಜಿಲ್ಲಾ ಪಂಚಾಯತಿ ಕ್ಷೇತ್ರ - ಸಾಮಾನ್ಯ, ಕಲಕೇರಿ ಜಿಲ್ಲಾ ಪಂಚಾಯತಿ ಕ್ಷೇತ್ರ - ಅನುಸೂಚಿತ ಜಾತಿ ( ಎಸ್.ಸಿ.) ಹಿರೇವಡ್ಡಟ್ಟಿ ಜಿಲ್ಲಾ ಪಂಚಾಯತಿ ಕ್ಷೇತ್ರ - ಹಿಂದೂಳಿದ ಅ.ವರ್ಗ (ಮಹಿಳೆ) ಡಂಬಳ ಜಿಲ್ಲಾ ಪಂಚಾಯತಿ ಕ್ಷೇತ್ರಕ್ಕೆ -ಅನುಸೂಚಿತ ಜಾತಿ ( ಎಸ್.ಸಿ. ಮಹಿಳೆ.) ಎಂದು ಘೋಷಣೆ ಮಾಡಲಾಗಿದೆ.

ಮುಂಡರಗಿ ತಾಲ್ಲೂಕು ಪಂಚಾಯಿತಿಗೆ 11 ಸ್ಥಾನಗಳಿದ್ದು. ಡಂಬಳ, ಸಾಮಾನ್ಯ(ಮಹಿಳೆ), ಡೋಣಿ, -ಅನುಸೂಚಿತ ಜಾತಿ(ಮಹಿಳೆ), ಕದಾಂಪೂರ,- ಅನುಸೂಚಿತ ಜಾತಿ, ಹಿರೇವಡ್ಡಟ್ಟಿ -ಸಾಮಾನ್ಯ, ಮೇವುಂಡಿ-

ಸಾಮಾನ್ಯ, ಆಲೂರ- ಹಿಂದುಳಿದ ವರ್ಗ ಅ (ಮಹಿಳೆ), ಕಲಕೇರಿ -ಅನುಸೂಚಿತ ಜಾತಿ(ಮಹಿಳೆ) ಹಾರೋಗೇರಿ - ಅನುಸೂಚಿತ ಪಂಗಡ(ಮಹಿಳೆ), ಕೊರ್ಲಹಳ್ಳಿ - ಸಾಮಾನ್ಯ, ಹಮ್ಮಿಗಿ-

ಸಾಮಾನ್ಯ(ಮಹಿಳೆ) , ಬಾಗೇವಾಡಿ -ಸಾಮಾನ್ಯ ಘೋಷಣೆ ಮಾಡಲಾಗಿದೆ ಎಂದು ರಾಜ್ಯ ಚುನಾವಣೆ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಧ್ಯಕ್ಷರ ಆಯ್ಕೆ ಅಸಿಂಧು: ರಾಜ್ಯ ಸಂಘದ ಆದೇಶ

ಲಕ್ಷ್ಮೇಶ್ವರ, 12- ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ಲಕ್ಷ್ಮೇಶ್ವರ ತಾಲ್ಲೂಕು ಘಟಕದ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಸಂಘದ ಬೈಲಾ ನಿಯಮಗಳ ಉಲ್ಲಂಘನೆಯಾಗಿದೆ. ಹೀಗಾಗಿ ರಾಜ್ಯಾಧ್ಯಕ್ಷರಾದ ಶಂಕರ ಬಿಸರಳ್ಳಿ ಅವರ ಆದೇಶದ ಮೇರೆಗೆ ಈ ಆಯ್ಕೆ ಅಸಿಂಧು ಎಂದು ರಾಜ್ಯ ಸಂಘದ ಪ್ರಧಾನ ಕಾರ್ಯದರ್ಶಿ ಪರಮೇಶ ಪಟ್ಟಣಶೆಟ್ಟಿ ತಿಳಿಸಿದ್ದಾರೆ.

ಈ ಕುರಿತು ಗೊಂದಲಗಳಿಗೆ ತೆರೆ ಎಳೆಯುವ ನಿಟ್ಟಿನಲ್ಲಿ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು ಹಾಲಿ ತಾಲ್ಲೂಕು ಘಟಕದ ಅಧ್ಯಕ್ಷ ಮಂಜುನಾಥ ಮಾಗಡಿ ಸೇರಿ ರಾಜ್ಯಾದ್ಯಂತ ತಾಲ್ಲೂಕು ಜಿಲ್ಲಾ ಹಾಗೂ ರಾಜ್ಯ ಘಟಕಗಳ ಅಧ್ಯಕ್ಷರ ಅಧಿಕಾರಾವಧಿ ಇನ್ನೂ ಪೂರ್ಣಗೊಂಡಿಲ್ಲ. ಅವಧಿ ಮುಗಿದ ನಂತರ ಮುಂದಿನ ಅವಧಿಯ ಅಧ್ಯಕ್ಷರ ಆಯ್ಕೆಯನ್ನು ಬೈಲಾ ನಿಯಮಗಳ ಪ್ರಕಾರ ಚುನಾವಣೆ ಪ್ರಕ್ರಿಯೆ ನಡೆಸಲಾಗುತ್ತದೆ. ಆದರೆ ಈವರೆಗೆ ಯಾವುದೇ ಚುನಾವಣೆ ಪ್ರಕ್ರಿಯೆ ನಡೆದಿಲ್ಲ ಎಂದು ಸ್ಪಷ್ಟಪಡಿಸಿರುವ ಅವರು ಅ.9ರಂದು ಲಕ್ಷ್ಮೇಶ್ವರದ ಜಗದ್ಗುರು ರಂಭಾಪುರಿ ಕಲ್ಯಾಣ ಮಂಟಪದಲ್ಲಿ ನಡೆದ ಸಮಾಜದ ಮುಖಂಡರ ಸಭೆಯಲ್ಲಿ ಶಂಕರ ರಾಗಿ ಅವರನ್ನು ಲಕ್ಷ್ಮೇಶ್ವರ ತಾಲ್ಲೂಕು ಘಟಕದ ನೂತನ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಘೋಷಿಸಿರುವುದು ರಾಜ್ಯ ಸಂಘದ ನಿಯಮಾವಳಿಗೆ ವಿರುದ್ಧವಾಗಿದೆ. ಈ ಹಿನ್ನಲೆಯಲ್ಲಿ ತಾಲ್ಲೂಕು ಘಟಕದ ಆಯ್ಕೆಯನ್ನು ಅಸಿಂಧು ಎಂದು ಪರಿಗಣಿಸಲಾಗಿದೆ. ಅಲ್ಲದೇ ಸದ್ಯಕ್ಕೆ ಹಾಲಿ ಅಧ್ಯಕ್ಷ ಮಂಜುನಾಥ ಮಾಗಡಿ ಅವರೇ ಮುಂದುವರೆಯಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಶಿಕ್ಷಕರಿಗೆ ಎಕ್ಸಲೆನ್ಸ್ ಟೀಚರ್ ಪ್ರಶಸ್ತಿ

ಲಕ್ಷ್ಮೇಶ್ವರ, 12- ಸ್ಕೂಲ್ ಚಂದನದಲ್ಲಿ ಎರಡು ದಶಕಗಳಿಗಿಂತ ಹೆಚ್ಚು ಕಾಲ ನಿರ್ದೇಶಕರಾಗಿ ಸೇವೆ ಸಲ್ಲಿಸಿ ಸಾವಿರಾರು ವಿದ್ಯಾರ್ಥಿಗಳಿಗೆ ಹಾಗೂ ಯುವ ಶಿಕ್ಷಕರಿಗೆ ಮಾರ್ಗದರ್ಶಕರಾಗಿದ್ದ ದಿ.ಎಚ್.ಸಿ.ರಟಗೇರಿ ಅವರ ಗುರುಸ್ಮರಣೆ ಕಾರ್ಯಕ್ರಮವನ್ನು ಸ್ಕೂಲ್ ಚಂದನ ಹಾಗೂ ಎವಿಆರ್ ಫೌಂಡೇಷನ್ ಇವರ ಸಂಯುಕ್ತ ಆಶ್ರಯದಲ್ಲಿ ಭಾನುವಾರ ಆಯೋಜಿಸಲಾಗಿತ್ತು.

ರಟಗೇರಿ ಅವರ ಶಿಷ್ಯರಾದ ನರರೋಗ ತಜ್ಞ ಡಾ.ಎಸ್.ಪಿ. ಬಳಿಗಾರ ಮಾತನಾಡಿ 'ಗುರುಗಳು ಉತ್ತಮ ಸಮಾಜದ ಶಿಲ್ಪಿಗಳು. ವಿದ್ಯಾರ್ಥಿಗಳ ಬದುಕಿಗೆ ಸರಿಯಾದ ದಿಕ್ಕು ತೋರಿಸುವ ಮಹತ್ತರ ಜವಾಬ್ದಾರಿ ಅವರ ಮೇಲಿದೆ. ಶಿಕ್ಷಕರು ಬೋಧನೆಯ ಜೊತೆಗೆ ವಿದ್ಯಾರ್ಥಿಗಳಲ್ಲಿ ಸಂಸ್ಕಾರ, ಶಿಸ್ತು, ಮಾನವೀಯ ಮೌಲ್ಯ ಹಾಗೂ ಸಮಾಜಮುಖಿ ಚಿಂತನೆಗಳನ್ನು ಬೆಳೆಸಬೇಕು. ವಿದ್ಯಾರ್ಥಿಗಳ ಸಾಧನೆಯ ಹಿಂದೆ ಶಿಕ್ಷಕರ ಮಾರ್ಗದರ್ಶನ ಮತ್ತು ಪ್ರೇರಣೆ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಹೇಳಿದರು. ದಿ. ಎಚ್.ಸಿ. ರಟಗೇರಿ ಗುರುಗಳ ಆದರ್ಶ, ಶೈಕ್ಷಣಿಕ ಸೇವೆ ಹಾಗೂ ವ್ಯಕ್ತಿತ್ವವನ್ನು ಸ್ಮರಿಸುವ ಇಂತಹ ಕಾರ್ಯಕ್ರಮಗಳು ಇಂದಿನ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಬೇಕು. ಗುರುಗಳ ಸಾಧನೆ ಹಾಗೂ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವುದು ಸಮಾಜದ ಕರ್ತವ್ಯ ಆಗಿದೆ' ಎಂದು ತಿಳಿಸಿದರು.

ನಿವೃತ ನ್ಯಾಯದೀಶ ಡಿ.ವೈ. ಬಸಾಪುರ ಮಾತನಾಡಿ 'ಶಿಕ್ಷಕ ವೃತ್ತಿಗೆ ಮೆರಗು ತಂದು ಕೊಟ್ಟವರು ದಿ.ಎಚ್.ಸಿ. ರಟಗೇರಿ ಗುರುಗಳು. ಪ್ರಾಮಾಣಿಕವಾಗಿ ಸೇವೆ ಸಲ್ಲಿಸುವುದರ ಜೊತೆ ಚಂದನ ಶಾಲೆಗೆ ಯಾವುದೇ ಸಂಬಳ ಇಲ್ಲದೆ ಎರಡು ದಶಕಗಳಿಗೂ ಹೆಚ್ಚು ಕಾಲ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿ ಗುರುವಿನ ಮಹತ್ವವನ್ನು ಸಾರಿದ್ದಾರೆ. ಅಂತಹ ಶ್ರೇಷ್ಠ ಗುರುವಿನ ಕೈಯಲ್ಲಿ ಶಿಕ್ಷಣ ಪಡೆದ ನಾವೆಲ್ಲರೂ ಧನ್ಯರು' ಎಂದರು.

ಕಾರ್ಯಕ್ರಮದ ಅಂಗವಾಗಿ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿದ ಶಿಕ್ಷಕರಿಗೆ ಎಕ್ಸಲೆನ್ಸ್ ಟೀಚರ್ ಪ್ರಶಸ್ತಿ ಹಾಗೂ ಶೈಕ್ಷಣಿಕ ಮತ್ತು ಇತರ ಸಾಧನೆಗಳ ಮೂಲಕ ಗಮನ ಸೆಳೆದ ಇಬ್ಬರು ವಿದ್ಯಾರ್ಥಿಗಳಿಗೆ ಎಕ್ಸಲೆನ್ಸ್ ಸ್ಟೂಡೆಂಟ್ಸ್ ಅವಾರ್ಡ್ ನೀಡಿ ಗೌರವಿಸಲಾಯಿತು. ಅಧ್ಯಕ್ಷತೆ ವಹಿಸಿದ್ದ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ಟಿ.ಈಶ್ವರ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ ಮಂಜುನಾಥ ನಾವಿ, ಗಿರಿಜಾ ಈಶ್ವರ, ಸರಸ್ವತಿ ರಟಗೇರಿ, ಡಾ.ವಿನೋದ ರಟಗೇರಿ, ರಮೇಶ ರಟಗೇರಿ, ಶಿವಾನಂದ ರಟಗೇರಿ, ಪ್ರಾಚಾರ್ಯ ರಾಮು ಭಾವನವರ, ವೀರಣ್ಣ ಶೆಟ್ಟರ, ಬಸಪ್ಪ ಹಲಗೋಡ, ಶಿವಾನಂದ ಬಡಿಗೇರ, ಇಬ್ರಾಹಿಂಸಾಬ್ ನಧಾಪ್, ಸಿದ್ಧಲಿಂಗೇಶ ಮರಿಗೌಡರ, ಭೀಮಶಿ ಮತ್ತು ದಿವ್ಯಾ ಚಂದನ ಸ್ಕೂಲ್‌ನ ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು.

### ಜಿಲ್ಲಾಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟ

# ಕಮಲಾಪುರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕ್ರೀಡಾಪಟುಗಳು ಜಯಭೇರಿ

ಕೂಡ್ಲಿಗಿ, 12– ಶನಿವಾರ ನಡೆದ ಜಿಲ್ಲಾಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ಕಮಲಾಪುರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕ್ರೀಡಾಪಟುಗಳು ಅಪ್ರತಿಮ ಪ್ರದರ್ಶನ ನೀಡಿ ಭರ್ಜರಿ ಜಯಭೇರಿ ಬಾರಿಸಿದ್ದಾರೆ.

ರೋಚಕವಾಗಿ ಸಾಗಿದ ಕಬಡ್ಡಿ ಫೈನಲ್ ಹಣಾಹಣಿಯಲ್ಲಿ ಆತಿಥೇಯ ಕೂಡ್ಲಿಗಿ ಪಿಯು ಕಾಲೇಜು ತಂಡವನ್ನು ಕಮಲಾಪುರ ಕಾಲೇಜು ತಂಡ ಎದುರಿಸಿತು. ಆರಂಭದಿಂದಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿದ ಕಮಲಾಪುರದ ಆಟಗಾರರು ಎದುರಾಳಿ ತಂಡದ ಮೇಲೆ ಸಂಪೂರ್ಣ ಹಿಡಿತ ಸಾಧಿಸಿದರು. ಬರೋಬ್ಬರಿ 23 ಅಂಕಗಳನ್ನು ಕಲೆಹಾಕಿದರು. ಕೂಡ್ಲಿಗಿ ತಂಡ ಕೇವಲ 5ಕ್ಕೆ ತೃಪ್ತಿ ಪಟ್ಟಿತು. ಅಂತಿಮವಾಗಿ



ಕಮಲಾಪುರ ತಂಡವು 18 ಅಂಕಗಳ ಬೃಹತ್ ಅಂತರದಿಂದ ಕೂಡ್ಲಿಗಿ ತಂಡವನ್ನು ಮಣಿಸಿ ಪ್ರಶಸ್ತಿ ಮುಡಿಗೇರಿಸಿಕೊಂಡಿತು. ಕಾಲೇಜಿನ ಉಪನ್ಯಾಸಕ ಶರಣಪ್ಪ ಅವರ ಮಾರ್ಗದರ್ಶನ ಹಾಗೂ ನಾಯಕ ಅವಿನ್ ಕುಮಾರ್ ಅವರ ಚುರುಕಿನ ನಾಯಕತ್ವದಲ್ಲಿ ತಂಡವು ಸಂಘಟಿ–ತ ಆಟ ಪ್ರದರ್ಶಿಸಿತು. ತಂಡದ ಸದಸ್ಯರಾದ ಚೇತನ್ ಕುಮಾರ್, ಹನುಮಂತ ನಾಯ್ಕ, ಅಪ್ಪು ನಾಯ್ಕ, ಕೃಷ್ಣ ಕುಮಾರ್, ಆನಂದ್ ನಾಯ್ಕ, ಸಂತೋಷ್, ವೆಂಕಟೇಶ್, ಶರತ್ ಹಾಗೂ ಹರಿದಾಸ ಅವರ ಆಕರ್ಷಕ ಆಟ, ಬಲಿಷ್ಠ ಟ್ಯಾಕಲ್ ಮತ್ತು ರೈಡಿಂಗ್ ಕ್ರೀಡಾಭಿಮಾನಿಗಳನ್ನು ಮಂತ್ರಮುಗ್ಧರನ್ನಾಗಿಸಿತು. ಜಿಲ್ಲಾಮಟ್ಟದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿ ರಾಜ್ಯಮಟ್ಟಕ್ಕೆ ಅರ್ಹತೆ ಪಡೆದರು.

# ಚಿರತೆ ಚಲನವಲನ ಇರುವ ಬಗ್ಗೆ ಅರಣ್ಯ ಅಧಿಕಾರಿಗಳಿಂದ ಸ್ಥಳ ಪರಿಶೀಲನೆ

ವರದಿ : ಡಿ.ಪರಶುರಾಮಪ್ಪ

ಹೂವಿನಹಡಗಲಿ, 12– ಗಡಿ ದುರ್ಗಮ್ಮ ಕ್ರಾಸ್ ಹತ್ತಿರವಿರುವ ತುಂಬಿನಕೇರಿ ಪ್ರಾದೇಶಿಕ ವಲಯ ಅರಣ್ಯವಿದೆ. ಈ ಅರಣ್ಯದಿಂದ ಅನೇಕ ಕಾಡು ಪ್ರಾಣಿಗಳು ಪಕ್ಕದಲ್ಲಿರುವ ಜಮೀನುಗಳಲ್ಲಿ ಆಹಾರಕ್ಕಾಗಿ ಸಂಚರಿಸುವುದನ್ನು ಹಾಗೂ ಚಿರತೆಯ ಧ್ವನಿ ಕೇಳಿ ಜಮೀನಿನಲ್ಲಿ ವಾಸಿಸುವ ಸ್ಥಳೀಯ ವಾಸಿಗರ ಮನೆ ಮುಂದಿನ ನಾಯಿಗಳು ಚಿರತೆ ಬಂದ ದಾರಿಗೆ ಮುಖ ಮಾಡಿ ಬೋಳುವುದು ಸೇರಿದಂತೆ ಸ್ಥಳೀಯ ವಾಸಿಗಳಿಗೆ ಮುನ್ನೆಚ್ಚರಿಕೆಯ ಕ್ರಮವಾಗಿ ಉಪವಲಯ ಅರಣ್ಯ ಅಧಿಕಾರಿ ಚಂದ್ರು ಬಣಕಾರ್ ಅವರು ಸ್ಥಳ ಪರಿಶೀಲನೆ ನಡೆಸಿ,ತಾವೇ ಸ್ವತಃ ಪಟಾಕಿ ಕೊಟ್ಟು, ರಾತ್ರಿ ವೇಳೆಯಲ್ಲಿ ಕಾಡು ಪ್ರಾಣಿಗಳಿಂದ ಏನಾದರೂ ತೊಂದ–ರೆ ಅಥವಾ ಧ್ವನಿ ಕೇಳಿ ಬಂದಲ್ಲಿ ಈ ಪಟಾಕಿ ಸಿಡಿಸಲು ಹೇಳಿದರು. ಹಿರೇಹಡಗಲಿ ಹೋಬಳಿಯ ವ್ಯಾಪ್ತಿಯಲ್ಲಿ ಬರುವ ಕತ್ತೆಬೆನ್ನೂರು ಗ್ರಾಮದ ನಿವಾಸಿಯಾದ ಪರಶುರಾಮಪ್ಪ ಅವರ ಮನೆ ಮತ್ತು ಜಮೀನಿನ ಸುತ್ತಮುತ್ತ ಚಿರತೆ ಕಂಡು ಬಂದ ಹಿನ್ನೆಲೆಯಲ್ಲಿ ಹಿರೇಹಡಗಲಿ ಶಾಖೆ–



ಯ ಉಪವಲಯ ಅರಣ್ಯಾಧಿಕಾರಿ ಚಂದ್ರು ಬಣಕಾರ್ ಸಿಬ್ಬಂದಿಗಳಾದ ವೆಂಕಟೇಶ, ನಾಗಪ್ಪ, ಹಾಲೇಶ ಮತ್ತು ಅರುಣ ಸ್ಥಳಕ್ಕೆ ಹೋಗಿ ಸ್ಥಳ ಪರಿಶೀಲನೆ ಮಾಡಿ ನಸುಕಿನ ಸಮಯದಲ್ಲಿ ಮತ್ತು ರಾತ್ರಿ ಸಮಯದಲ್ಲಿ ಒಬ್ಬಂಟಿಯಾಗಿ ಓಡಾಡದಂತೆ ಜಾಗೃತರಾಗಿರುವಂತೆ ಸಲಹೆ ನೀಡಿ, ಒಂಟಿಯಾಗಿ ಮಕ್ಕಳನ್ನು ಹೊರಗಡೆ ಕಳುಹಿಸಬೇಡಿ, ಕಾಡು ಪ್ರಾಣಿಗಳು ಬೇರೆ, ನಿಮ್ಮಗಳ ರಕ್ಷಣೆಯೇ ನಮ್ಮ ಜವಾಬ್ದಾರಿ ಆಗಿದೆ. ಭಯ ಪಡದೇ ನೀವೂ ಆರೋಗ್ಯವಾಗಿ ಇರಿ, ಧೈರ್ಯ ತುಂಬಿದ ಅಧಿಕಾರಿಗಳು ಚಿರತೆಯ ಚಲನವಲನ ಇರುವ ಬಗ್ಗೆ ಚಿರತೆ ಬೋನ್ ಅಳವಡಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

# ಇಂದು 'ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ' ಕಾರ್ಯಕ್ರಮ

ಬಳ್ಳಾರಿ,12– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಆಸ್ಪತ್ರೆ, ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಬಿ.ಐ.ಟಿ.ಎಂ ಕಾಲೇಜಿನ ಸಂಯುಕ್ತಾಶ್ರಯದಲ್ಲಿ 'ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ" ಕಾರ್ಯಕ್ರಮವನ್ನು ಅಕ್ಟೋಬರ್ 13 ರಂದು ಆಯೋಜಿಸಲಾಗಿದೆ.

ಕಾರ್ಯಕ್ರಮವು ನಗರದ ಬಿ.ಐ.ಟಿ.ಎಂ ಕಾಲೇಜಿನ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆಗೆ ಜರುಗಲಿದ್ದು, ಈ ಬಾರಿಯ ಧ್ಯೇಯವಾಕ್ಯ 'ಅನುಭವದ ಧ್ವನಿಗಳಿಗೆ ಕಿವಿಯಾಗೋಣ– ನೈಜ ಧ್ವನಿಗಳಿಂದ ನೈಜ ಬದಲಾವಣೆ' ಎಂಬುದಾಗಿದೆ.

ಕಾರ್ಯಕ್ರಮವನ್ನು ಬಳ್ಳಾರಿಯ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಮಾನಸಿಕ ಆರೋಗ್ಯ ವಿಮರ್ಶಾ ಮಂಡಳಿ ಅಧ್ಯಕ್ಷರಾದ ಮೋಹನ್ ಎಚ್.ಎ ಅವರು ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್. ಹೊಸಮನೆ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಅಲಕಾನಂದ ಡಿ ಮಳಗಿ ಉಪಸ್ಥಿತರಿರಲಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಿ.ಐ.ಟಿ.ಎಂ ಕಾಲೇಜಿನ ಅಧ್ಯಕ್ಷ ಡಾ. ಯಶವಂತ್ ಭೂಪಾಲ್ ವಹಿಸಲಿದ್ದಾರೆ. ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಅನುಷ್ಠಾನ ಅಧಿಕಾರಿ ಡಾ. ವೀರೇಂದ್ರ ಕುಮಾರ್ ಕೆ.ಜಿ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದು, ಜಿಲ್ಲಾ ಕೇಂದ್ರ ಕಾರಾಗೃಹದ ಮನೋರೋಗ ತಜ್ಞ ಡಾ. ನಂದ ಕಿಶೋರ್ ರೆಡ್ಡಿ ಅವರು ಉಪನ್ಯಾಸ ನೀಡಲಿದ್ದಾರೆ.

ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಎನ್. ಬಸರೆಡ್ಡಿ, ಜಿಲ್ಲಾ ರೋಗವಾಹಕ ಆಶ್ರೀತ ರೋಗಗಳ ನಿಯಂತ್ರಣಾಧಿಕಾರಿ ಡಾ.ಆರ್. ಅಬ್ದುಲ್ಲಾ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಮರಿಯಂಬಿ ವಿ.ಕೆ., ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ. ಇಂದ್ರಾಣಿ ವಿ., ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಹನುಮಂತಪ್ಪ, ಬಿ.ಐ.ಟಿ.ಎಂ ಕಾಲೇಜಿನ ನಿರ್ದೇಶಕ ಡಾ. ಪೃಥ್ವಿರಾಜ್ ಭೂಪಾಲ್ ಹಾಗೂ ಪ್ರಾಂಶುಪಾಲ ಡಾ. ಯಡವಲ್ಲಿ ಬಸವರಾಜ್ ಮುಂತಾದ ಗಣ್ಯರು ಭಾಗವಹಿಸಲಿದ್ದಾರೆ. ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಪ್ರಕಾಶ್ ಎಸ್ ಕರ್ಜಗಿ ಅವರು ಸ್ವಾಗತ ಹಾಗೂ ನಿರೂಪಣೆ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ವಿಬಿಜಿ ರಾಮ್ ಜಿ ನರೇಗಾ ಕೂಲಿ ಹಣ ಪಾವತಿಸದೇ ನಿರ್ಲಕ್ಷಿಸಿದ ಹಿರೇಹಡಗಲಿ ಪಿಡಿಓ

ವರದಿ :ಡಿ.ಪರಶುರಾಮಪ್ಪ

ಹೂವಿನಹಡಗಲಿ, 12–ಎನ್‌ಎಮ್‌ಆರ್ ಕೂಲಿ ಹಾಕದೆ ವಿಳಂಬ ಮಾಡಿದ ಹಿರೇಹಡಗಲಿ ಗ್ರಾಮ ಪಂಚಾಯಿತಿ ಅಧಿಕಾರಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಲು ಒತ್ತಾಯಿಸಿ ಹಿರೇಹಡಗಲಿ ಗ್ರಾಮದಲ್ಲಿ ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆಯಿಂದ (ಗ್ರಾಕೂಸ್ ) ಭಾರತ ಸರ್ಕಾರದ ಪ್ರಧಾನ ಮಂತ್ರಿಗಳಿಗೆ, ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳಿಗೆ ಹಾಗೂ ಹಾಗೂ ವಿಜಯನಗರ ಜಿಲ್ಲೆಯ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ವಿಬಿಜಿ ರಾಮ್ ಜಿ ನರೇಗಾ ಯೋಜನೆ ಕಳೆದ ಮೂರು ತಿಂಗಳಿಂದ ಕೂಲಿ ಕಾರ್ಮಿಕರಿಗೆ ಹಣ ಪಾವತಿ ಮಾಡದೆ ಹಿರೇಹಡಗಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ವಿಳಂಬ ನೀತಿ ಖಂಡಿಸಿ ಪತ್ರ ಚಳುವಳಿ ನಡೆಸಿದರು.

ವಿಬಿಜಿ ರಾಮ್ ಜಿ ಕಾಯ್ದೆಯಡಿ 2026 –27 ನೇ ಸಾಲಿನ ಜುಲೈ ನಿಂದ ಸಪ್ಟಂಬರ್ ವರೆಗಿನ ಕೆಲಸ ಮಾಡಿದ ಎನ್‌ಎಮ್‌ಆರ್ ಕೂಲಿ ಹಣ ಇನ್ನೂ ಪಾವತಿ ಆಗಿಲ್ಲ. ಹಿರಿಯ ಹಡಗಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ನಿಲಕ್ಷತನದಿಂದ ಕೂಲಿಕಾರ್ಮಿಕರಿಗೆ ಹಣ ನೀಡದೆ ನಿರ್ಲಕ್ಷ ವಹಿಸಿದ್ದಾರೆ. ಇದರಿಂದಾಗಿ ಕೂಲಿಕಾರ್ಮಿಕರ ಜೀವನ ಸಂಕಷ್ಟದ ಸ್ಥಿತಿಯಲ್ಲಿ



ಇದೆ. ವಿಬಿಜಿ ರಾಮ್ ಜಿ ಯೋಜನೆಯ 150 ಮಾನವ ದಿನಗಳನ್ನು ಕೊಡಿಸಬೇಕು. ಕೂಲಿ ಪಾವತಿಸದೆ ವಿಳಂಬ ಮಾಡಿದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು. ಇಲ್ಲವೇ ಕಾನೂನಿನ ಮೂಲಕ ಪರಿಹಾರ ಬತ್ತೆ ವಿತರಿಸಬೇಕು. ಏಕೆ–ಂದರೆ ಬರಗಾಲದಿಂದ ಜನತೆ ಕಂಗಾಲಾಗಿದ್ದು, ಎನ್ ಎಮ್ ಆರ್ ಕಾಮಗಾರಿಗಳು ಮುಗಿಯುತ್ತಾ ಬಂದರು ದುಡಿದ ಹಣ ಕೈಗೆ ಸಿಗದಿದ್ದರಿಂದ, ಕೂಲಿ ಕಾರ್ಮಿಕರ ಜೀವನ ಸಾಗಿಸುವುದು ಕಷ್ಟದ ಕೆಲಸವಾಗಿದೆ. ಹೆತ್ತೂರಿ ಕ್ರಿಯಾಯೋಜನೆ ಮಾಡಿಸಿ ಕೂಲಿ ಹಣ ಪಾವತಿಯಾಗಲು ಕ್ರಮವಹಿಸಬೇಕು ಎಂದು ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆಯ (ಗ್ರಾಕೂಸ್) ಕಾರ್ಯಕರ್ತರಾದ ಶಬ್ಬೀರ್ ಭಾಷಾ ಹೇಳಿದರು.

ಈ ಸಂದರ್ಭದಲ್ಲಿ ಮೇಟಿಗಳು ವೀರೇಶ, ಲೋಹಿತ, ಡಿ.ಮಂಜುನಾಥ, ಕೋಟೆಪ್ಪ, ನಾಗಣ್ಣ, ವಾಮದೇವ, ಹಾಲೇಶ, ಸಂತೋಷ, ಪ್ರಭು, ಶೇಕಪ್ಪ, ರವಿ ,ಹಾಗೂ ಮೇಟಿಗಳು, ಗೀತಮ್ಮ, ಸಾವಿತ್ರಮ್ಮ, ರೇಣುಕಮ್ಮ, ತಾರಮ್ಮ, ದುರ್ಗಮ್ಮ, ರತ್ನಮ್ಮ, ರೇಖಾಮ್ಮ, ಪ್ರೇಮಕ್ಕ ,ಶೋಭವ್ವ, ಕಾರ್ಮಿಕರು ಇದ್ದರು.

# ಬೆಂಬಲ ಬೆಲೆ ಯೋಜನೆಯಡಿ ಸೂರ್ಯಕಾಂತಿ ಖರೀದಿ ಕೇಂದ್ರ ಸ್ಥಾಪನೆ

ವಿಜಯನಗರ (ಹೊಸಪೇಟೆ), 12– ಬೆಂಬಲ ಬೆಲೆ ಯೋಜನೆಯಡಿ 2026–27 ನೇ ಸಾಲಿಗೆ ಕರ್ನಾಟಕ ಸಹಕಾರ ಎಣ್ಣೆ ಬೀಜ ಬೆಳೆಗಾರರ ಮಾರಾಟ ಮಹಾ ಮಂಡಳಿ ವತಿಯಿಂದ ಎಫ್‌ಎಕ್ಯೂ ಗುಣಮಟ್ಟದ ಸೂರ್ಯಕಾಂತಿ ಉತ್ಪನ್ನ ಖರೀದಿ ಕೇಂದ್ರ ಪ್ರಾರಂಭಿಸಲಾಗಿದೆ.

ಬೆಂಬಲ ಬೆಲೆ ಯೋಜನೆಯಡಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ನಂದಿಬೇವೂರು, ಹಗರಿ ಬೊಮ್ಮನಹಳ್ಳಿ ತಾಲ್ಲೂಕಿನ ಉಪನಾಯಕನಹಳ್ಳಿ, ಕೂಡ್ಲಿ–ಗಿಯ ಚಂದ್ರಶೇಖರಪುರ ಹಾಗೂ ಕೊಟ್ಟೂರು ತಾಲ್ಲೂಕಿನ ದೂಪದಹಳ್ಳಿ ಗ್ರಾಮಗಳಲ್ಲಿ ಖರೀದಿ ಕೇಂದ್ರಗಳು ಸ್ಥಾಪಿಸಲಾಗಿದ್ದು, ಪ್ರತಿ ಕ್ವಿಂಟಾಲ್‌ಗೆ ರೂ.8343 ರಂತೆ ಖರೀದಿಸಲಾಗುವುದು.

ರೈತರು ಖರೀದಿ ಕೇಂದ್ರಗಳಲ್ಲಿ ನೊಂದಣಿ ಮಾಡಿಕೊಳ್ಳಲು ಡಿಸೆಂಬರ್ 19 ಕೊನೆಯ ದಿನವಾಗಿದ್ದು, ಡಿಸೆಂಬರ್ 29 ಖರೀದಿಗೆ ಕೊನೆಯ ದಿನಾಂಕವಾಗಿದೆ. ನಿಗದಿತ ಅವಧಿಯೊಳಗೆ ನೊಂದಣಿಗೊಂಡ ರೈತ–ರಿಂದ ಪ್ರತಿ ಎಕರೆಗೆ 4 ಕ್ವಿಂಟಾಲ್ ಗರಿಷ್ಠ 20 ಕ್ವಿಂಟಾಲ್ ಖರೀದಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಇಲಖೆಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

# ಕುರುಬರ ಸಂಘದ ಆಡಳಿತದ ಜವಾಬ್ದಾರಿ ವಹಿಸಿಕೊಂಡ ಪದಾಧಿಕಾರಿಗಳು

ಬಳ್ಳಾರಿ, 12– ಬಳ್ಳಾರಿ ಜಿಲ್ಲಾ ಕುರುಬರ ಸಂಘದ 2025ರ ಮಾರ್ಚ್ 3ರ ಕಾರ್ಯಕಾರಿ ಸಮಿತಿಯ ನಡಾವಳಿ ಹಾಗೂ ಸಂಘಗಳ ನೋಂದಣಿ ಅಧಿಕಾರಿ ಮತ್ತು ಸಹಕಾರ ಸಂಘಗಳ ಉಪನಿಬಂಧಕರು ನೀಡಿದ ಆದೇಶದಂತೆ, ಸಂಘದ ಪದಾಧಿಕಾರಿಗಳು ಸೋಮವಾರ ಸ್ವಯಂಪ್ರೇರಿತವಾಗಿ ಆಡಳಿತದ ಕಾರ್ಯಭಾರ ವಹಿಸಿಕೊಂಡರು.

ಮಾನ್ಯ ಉಚ್ಚ ನ್ಯಾಯಾಲಯದ ಧಾರವಾಡ ಪೀಠವು ಅಕ್ಟೋಬರ್ 7ರಂದು ನೀಡಿದ ಆದೇಶದ ಹಿನ್ನೆಲೆಯಲ್ಲಿ, ಪೂಜ್ಯ ಶ್ರೀ ಶರಣಯ್ಯ ಸ್ವಾಮಿ ಓಡೆ–ಯರ್ ಹಾಗೂ ಸಂಘದ ನಿರ್ದೇಶಕರ ಸಮ್ಮುಖದಲ್ಲಿ ಪದಾಧಿಕಾರಿಗಳು ಅಧಿಕಾರ ಮತ್ತು ಕಾರ್ಯಭಾರ ವಹಿಸಿಕೊಂಡರು. ಬಳಿಕ ಈ ಕುರಿತು ಬಳ್ಳಾರಿ ಜಿಲ್ಲಾ ಸಂಘಗಳ ನೋಂದಣಿ ಅಧಿಕಾರಿ ಹಾಗೂ ಸಹಕಾರ ಸಂಘಗಳ ಉಪನಿಬಂಧಕರಿಗೆ ಅಧಿಕೃತವಾಗಿ ಮಾಹಿತಿ ನೀಡಿದರು.

ಸಂಘದ ಅಧ್ಯಕ್ಷರಾಗಿ ಕೆ.ಎಂ.



ಮಹಾಲಿಂಗನಗೌಡ, ಪ್ರಧಾನ ಕಾರ್ಯದರ್ಶಿಯಾಗಿ ಕೆ.ಎಸ್. ರಘು, ಖಜಾಂಚಿಯಾಗಿ ಟಿ.ಕೆ. ಕಾಮೇಶ, ಉಪಾಧ್ಯಕ್ಷರಾಗಿ ಕೆ. ನಾಗರಾಜ, ಸಹ ಕಾರ್ಯದರ್ಶಿಯಾಗಿ ಕೆ.ಎಂ. ರಾಜೇಶ್ವರಿ ಹಾಗೂ ಸಂಘಟನಾ ಕಾರ್ಯದರ್ಶಿಯಾಗಿ ಕೆ. ಪರಶುರಾಮ ಅವರು ಮುಂದುವರಿದರು.

ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರಾದ ಕೆ. ಶಿವಕುಮಾರ್, ಕೆ.ಆರ್. ಸುರೇಂದ್ರ, ಜಾನೆಕುಂಟೆ ದೊಡ್ಡ ಬಸಪ್ಪ, ಗೊರವರ ಬಸವರಾಜ, ಶಾವೆಪಲ್ಲೆ ಬಸವರಾಜ, ಕರೂರು ಆದೆಪ್ಪ, ವಿತಲಾಪುರ ಉಮೇಶ್, ಸಿರುಗುಪ್ಪ ರೇವಣ್ಣ ಅಲಿಯಾಸ್ ದೇವು, ಬಂಡಿಹಟ್ಟಿ ಹೊನ್ನುರಸ್ವಾಮಿ ಹಾಗೂ ದೇವಲಾಪುರ ದಿಂಡಿ ಮಹರ್ಷಿ ಉಪಸ್ಥಿತರಿದ್ದರು.

### ಭೋವಿ ಸಮಾಜದ ಮುಖಂಡರೊಂದಿಗೆ ಶಾಸಕರ ಸೌಹಾರ್ದ ಭೇಟಿ

# ಪ್ರಸಕ್ತ ವಿದ್ಯಮಾನಗಳ ಕುರಿತು ಚರ್ಚೆ

ಕೂಡ್ಲಿಗಿ, 12– ತಾಲೂಕಿನ ಭೋವಿ ಸಮಾಜದ ಮುಖಂಡರು ಮಾನ್ಯ ಶಾಸಕರಾದ ಡಾ. ಶ್ರೀನಿವಾಸ್ ಎನ್.ಟಿ. ಅವರನ್ನು ಭೇಟಿಯಾಗಿ ಆತ್ಮೀಯವಾಗಿ ಮಾತುಕತೆ ನಡೆಸಿದರು.



ಈ ಸಂದರ್ಭದಲ್ಲಿ ಸಮಾಜದ ಪ್ರಮುಖ ವಿಚಾರಗಳು, ಕ್ಷೇತ್ರದ ಪ್ರಸಕ್ತ ವಿದ್ಯಮಾನಗಳು ಹಾಗೂ ವಿವಿಧ ಸಾರ್ವಜನಿಕ ವಿಷಯಗಳ ಕುರಿತು ಚರ್ಚಿಸಿ ವಿಚಾರ ವಿನಿಮಯ ಮಾಡಿಕೊಂಡರು. ಈ ಸೌಹಾರ್ದಯುತ ಭೇಟಿ ಸಮಾಜದ ಮುಖಂಡರು ಮತ್ತು ಶಾಸಕರ ನಡುವಿನ ಆತ್ಮೀಯ ಬಾಂಧವ್ಯಕ್ಕೆ ಸಾಕ್ಷಿಯಾಯಿತು.

ಈ ಸಂದರ್ಭದಲ್ಲಿ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾದ ಪಿ ಹೆಚ್ ದೊಡ್ಡರಾಮಣ್ಣ ಹಾಗೂ ಬೋವಿ ಸಮುದಾಯದ ಮುಖಂಡರು ಉಪಸ್ಥಿತರಿದ್ದರು

# ಮೈಸೂರು ದಸರಾ ಹಡಗಲಿಯ ಬಾಲ ಪ್ರತಿಭೆ ವರ್ಣಿಕಾ ಸುಗಮ ಸಂಗೀತ ಕಾರ್ಯಕ್ರಮ

ವರದಿ: ಡಿ.ಪರಶುರಾಮಪ್ಪ

ಹೂವಿನಹಡಗಲಿ, 12– ವಿಶ್ವವಿಖ್ಯಾತ ಮೈಸೂರು ದಸರಾ ಸಾಂಸ್ಕೃತಿಕ ಉತ್ಸವದ ಮೂರನೇ ದಿನವಾದ ಅ. 13ರಂದು ಹೂವಿನಹಡಗಲಿಯ ಬಾಲಪ್ರತಿಭೆ ಕು. ವರ್ಣಿಕಾ ಶಾನುಭೋಗರ್ ಜಗನ್ಮೋಹನ ಅರಮನೆಯ ವೇದಿಕೆಯಲ್ಲಿ ಸುಗಮ ಸಂಗೀತ ಕಾರ್ಯಕ್ರಮ ನೀಡಲಿದ್ದಾಳೆ.



ತಾಲೂಕಿನ ಜೆಎಸ್‌ಎಸ್ ಶಾಲೆಯಲ್ಲಿ 7ನೇ ತರಗತಿಯಲ್ಲಿ ಓದುತ್ತಿರುವ ವರ್ಣಿಕಾ, ಮೊರಗೇರೆಯ ಸಂಗೀತ ಶಿಕ್ಷಕ ಬಿ. ಯುವರಾಜಗೌಡ ಅವರ ಶಿಷ್ಯೆ. ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಅಭ್ಯಾಸ ಮಾಡುತ್ತಿರುವ. ವರ್ಣಿಕಾ ದಾಸರ ಪದಗಳು, ಜಾನಪದ ಗೀತೆಗಳು, ತತ್ವಪದಗಳು, ಭಕ್ತಿಗೀತೆಗಳು ವಚನ ಗಾಯನದ ಮೂಲಕ ಹಲವು ವೇದಿಕೆಗಳಲ್ಲಿ ಪ್ರತಿಭೆ ಪ್ರದರ್ಶಿಸಿದ್ದಾರೆ.

ಹಡಗಲಿಯ ಮಲ್ಲಿಗೆ ಕಲಾ ಸಂಸ್ಥೆ, ಗವಿಮಠ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಗಾಯನ ನೀಡಿರುವ ವರ್ಣಿಕಾ, 2025ರಲ್ಲಿ ಹಂಪಿ ಉತ್ಸವದ ಮುಖ್ಯ ವೇದಿಕೆಯಲ್ಲಿಯೂ ಸುಗಮ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟು ಗಮನ ಸೆಳೆದಿದ್ದಾರೆ.

ದಸರಾ ಕಾರ್ಯಕ್ರಮದಲ್ಲಿ ವರ್ಣಿಕಾ ಅವರಿಗೆ ಸಂಗೀತ ಗುರು ಬಿ. ಯುವರಾಜಗೌಡ ಹಾರ್ಮೋನಿಯಂ, ಹರಪನಹಳ್ಳಿಯ ಸಾಗರ ತಬಲಾದಲ್ಲಿ ಸಾಥ್ ನೀಡಲಿದ್ದಾರೆ. ಜಾನಪದ ಕಲಾವಿದ ಹಡಗಲಿ ಬಸವರಾಜ, , ಗಾಯಕಿ ಶ್ರೀಮತಿ ಶ್ರೀಲತಾ ಸಹಗಾಯಕರಾಗಿ ಭಾಗವಹಿಸಲಿದ್ದಾರೆ.

ವರ್ಣಿಕಾ ಅವರ ತಂದೆ ಸಿದ್ದೇಶ ಶಾನುಭೋಗರ್ ತಾಯಿ ಅಂಬುಜಾ ಅವರು ಮಗಳ ಸಂಗೀತಾಸಕ್ತಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ.

ಬಾಲ್ಯದಲ್ಲಿಯೇ ಸಂಗೀತ ಕ್ಷೇತ್ರದಲ್ಲಿ ಗುರುತಿಸಿಕೊಳ್ಳುತ್ತಿರುವ ಈ ಪ್ರತಿಭೆ ನಾಡಿನ ಕಲೆ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಕೊಡುಗೆ ನೀಡುವಂತಾಗಲಿ ಎಂದು ಗ್ರಾಮಸ್ಥರು ಗುರುಹಿರಿಯರು ಶುಭ ಹಾರೈಸಿದ್ದಾರೆ.

# ಬಾಲ್ ಬ್ಯಾಡ್ಮಿಂಟನ್ ನಲ್ಲಿ ಸೋಗಿ ಕಾಲೇಜ್ ರಾಜ್ಯಮಟ್ಟಕ್ಕೆ ಆಯ್ಕೆ

ವರದಿ :ಡಿ.ಪರಶುರಾಮಪ್ಪ

ಹೂವಿನಹಡಗಲಿ: ಪ್ರಸಕ್ತ ಶೈಕ್ಷಣಿಕ ಸಾಲಿನ ಪದವಿ ಪೂರ್ವ ಕಾಲೇಜುಗಳ

ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ತಾಲೂಕಿನ ಸೋಗಿ ಗ್ರಾಮದ ಪಟೆ–ೀದ ಸಿದ್ಧಮಲ್ಲಪ್ಪ ಸರ್ಕಾರಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಬಾಲ್ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆ ಆಗಿದ್ದಾ–ರೆ.



ಹೊಸಪೇಟೆಯಲ್ಲಿ ನಡೆದ ಜಿಲ್ಲಾಮಟ್ಟದ ಕ್ರೀಡಾಕೂಟದಲ್ಲಿ ತಮ್ಮ ಕ್ರೀಡಾ ಕೌಶಲ, ಸಂಘಟಿ–ತ ಆಟ, ಸಮಯಪ್ರಜ್ಞೆ ಮತ್ತು ಗೆಲ್ಲುವ ಛಲವನ್ನು ಪ್ರದರ್ಶಿಸಿದ ವಿದ್ಯಾರ್ಥಿಗಳು ರಾಜ್ಯಮಟ್ಟದ ಸ್ಪರ್ಧೆಗೆ ಅರ್ಹತೆ ಗಳಿಸಿದ್ದಾರೆ.

ಕಾಲೇಜಿನ ಕ್ರೀಡಾ ಸಾಧನೆಗೆ ಮತ್ತೊಂದು ಗರಿಮೆಯ ಗರಿ ಮೂಡಿಸಿದೆ. ಗ್ರಾಮೀಣ ಪ್ರತಿಭೆಗಳಿಗೆ ಸೂಕ್ತ ಅವಕಾಶ ಮತ್ತು ಪ್ರೋತ್ಸಾಹ ದೊರೆತರೆ ಅವರು ಉನ್ನತ ಮಟ್ಟದಲ್ಲಿ ಸಾಧನೆ ಮಾಡಬಲ್ಲರು ಎಂಬುದಕ್ಕೆ ಈ ಯಶಸ್ಸು ಸಾಕ್ಷಿಯಾಗಿದೆ.

ವಿದ್ಯಾರ್ಥಿಗಳ ಈ ಸಾಧನೆಗೆ ಕಾಲೇಜಿನ ಪ್ರಾಚಾರ್ಯರಾದ ಎಸ್. ಜ್ಯೋತಿ, ಕ್ರೀಡಾ ಕಾರ್ಯದರ್ಶಿ ಜಯಪ್ರಕಾಶ್, ಉಪನ್ಯಾಸಕರಾದ ವೆಂಕಟೇಶ್, ಪರಶುರಾಮ ನಾಗೋಜಿ, ಶಬೀನ, ನರೇಶ್, ನಟರಾಜ್ ಹಾಗೂ ನೇತ್ರಾವತಿ ಹರ್ಷ ವ್ಯಕ್ತಪಡಿಸಿದ್ದಾರೆ.

ಕಾಲೇಜು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರಾದ ಜಗದೀಶ್, ಸಮಿತಿ ಸದಸ್ಯರಾದ ವಿನಯ್ ಕುಮಾರ್, ಕೊಟ್ರೇಶ್ ಸೇರಿದಂತೆ ಎಲ್ಲ ಸದಸ್ಯರು ಹಾಗೂ ಗ್ರಾಮಸ್ಥರು ವಿದ್ಯಾರ್ಥಿಗಳ ಸಾಧನೆಯನ್ನು ಶ್ಲಾಘಿಸಿ ಅಭಿನಂದನೆ ಸಲ್ಲಿಸಿದ್ದಾರೆ.

### ಏಷ್ಯನ್ ಮಾಸ್ಟರ್ಸ್ ಈಜು ಚಾಂಪಿಯನ್‌ಶಿಪ್

# ಬಳ್ಳಾರಿಯ ರಜನಿ ಲಕ್ಕಗೆ 4 ಪದಕ

ಬಳ್ಳಾರಿ,12– ಬೆಂಗಳೂರಿನ ಯಲಹಂಕದ 'ದ್ರಾವಿಡ್ ಸೆಂಟರ್ ಫಾರ್ ಸ್ಪೋರ್ಟ್ಸ್ ಎಕ್ಸಲೆನ್ಸ್'ನಲ್ಲಿ ಅಕ್ಟೋಬರ್ 4 ರಿಂದ 10 ರವರೆಗೆ ನಡೆದ 2ನೇ ಏಷ್ಯನ್ ಮಾಸ್ಟರ್ಸ್ ಸ್ವಿಮ್ಮಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಬಳ್ಳಾರಿಯ ರಜನಿ ಲಕ್ಕ ಅವರು 4 ಪದಕಗಳನ್ನು ಮುಡಿಗೇರಿಸಿಕೊಂಡಿದ್ದಾರೆ.




65 ರಿಂದ 69 ವರ್ಷ ವಯಸ್ಸಿನ ವಿಭಾಗದಲ್ಲಿ ಸ್ಪರ್ಧಿಸಿದ್ದ ರಜನಿ ಲಕ್ಕ ಅವರು ಅತ್ಯುತ್ತಮ ಪ್ರದರ್ಶನ ನೀಡಿ ಒಟ್ಟು 1 ಚಿನ್ನ, 2 ಬೆಳ್ಳಿ ಹಾಗೂ 1 ಕಂಚಿನ ಪದಕ ಗೆದ್ದು ಕೀರ್ತಿ ತಂದಿದ್ದಾರೆ.

ಗೆದ್ದ ಪದಕಗಳ ವಿವರ:

200 ಮೀಟರ್ ಬಟರ್ ಫ್ಲೈ– ಚಿನ್ನದ ಪದಕ

100 ಮೀಟರ್ ಬಟರ್ ಫ್ಲೈ– ಬೆಳ್ಳಿ ಪದಕ

400 ಮೀಟರ್ ಐ.ಎಂ (ಇಂಡಿವಿಜುಯಲ್ ಮೆಡ್ಲೆ)– ಬೆಳ್ಳಿ ಪದಕ

200 ಮೀಟರ್ ಐ.ಎಂ–ಕಂಚಿನ ಪದಕ

ಈ ಪ್ರತಿಷ್ಠಿತ ಅಂತರರಾಷ್ಟ್ರೀಯ ಕೂಟದಲ್ಲಿ ಭಾರತ, ಜಪಾನ್, ಚೀನಾ, ಮಲೇಷಿಯಾ, ಶ್ರೀಲಂಕಾ, ಇರಾನ್, ಥೈಲ್ಯಾಂಡ್, ಓಮನ್ ಹಾಗೂ ದಕ್ಷಿಣ ಕೊರಿಯಾ ಸೇರಿದಂತೆ 9 ದೇಶಗಳ ಒಟ್ಟು 1,320 ಸ್ಪರ್ಧಿಗಳು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ರಜನಿ ಲಕ್ಕ ಅವರಿಗೆ ಜಿಲ್ಲಾಡಳಿತ ಅಭಿನಂದನೆ ತಿಳಿಸಿದೆ.




'HOSAPETE NADIMIDITA ' KANNADA DAILY NEWSPAPER PRINTEDE BY RAMJEE NAIK R PUBLISHER AND OWNED BY RAMJEE NAIK R, PRINTED AT HOMBALI PRINTING, 3787/A/6-7C MAHENDRAKAR CIRCLE, GADAG KARNATAKA-582101
PRGI NO: KNKAN/26/A1167 PAGES-4, DATE 01/03/2026. PUBLISHED AT HN,93, KALLAHALLI VILLAGE, HOSPET POST, VIJAYANAGARA, -583201, KARNATAKA STATE, EDITOR:RAMJEE NAIK R, CELL-9448717472.